REVIEW OF RESEARCH

IMPACT FACTOR : 5.7631(UIF)    UGC APPROVED JOURNAL NO. 48514    ISSN: 2249-894X

VOLUME - 8 | ISSUE - 5 | FEBRUARY - 2019

# ಹೈದ್ರಾಬಾದ ಕರ್ನಾಟಕದ ಪ್ರಾದೇಶಿಕ ಕಾದಂಬರಿಗಳ ಆರ್ಥಿಕ ವ್ಯವಸ್ಥೆ

**Dr. Bheemanna H.**

Assistant Professor and Head , Dept. Of Kannada , Govt. First Grade College & P.G.Center

Sedam Dist : Kalaburagi , Karnataka.

(Research Guide of Kannada University, Hampi)

**ABSTRACT :**




ಮನುಷ್ಯನು ತನ್ನ ಅರ್ಥ ವ್ಯವಸ್ಥೆಯನ್ನು ನಿಸರ್ಗದ ಪರಿಕರಗಳಿಂದ ಹಾಗೂ ಮಾನವ ಪ್ರಯತ್ನಗಳಿಂದ ರೂಪಿಸಿಕೊಂಡಿರುತ್ತಾನೆ. ಸಾಂಘಿಕವಾಗಿ ಬದುಕತೊಡಗಿದ ಮಾನವ ವ್ಯೆಯಕ್ತಿಕ, ಸಾಮಾಜಿಕ ಬೇಕು ಬೇಡಿಕೆಗಳ ಬಗೆಗೆ ಕೆಲವು ವ್ಯವಸ್ಥೆಗಳನ್ನು ರೂಪಿಸಿಕೊಂಡಂಥ ವ್ಯವಸ್ಥೆಗಳಲ್ಲಿ ಆರ್ಥಿಕ ಜೀವನವೂ ಒಂದಾಗಿದೆ. ಭಾರತ ದೇಶದಲ್ಲಿ ರೈತನು ರಾಷ್ಟ್ರದ ಬೆನ್ನೆಲುಬು ಎಂದು ಹೇಳುತ್ತೇವೆ. ಕ್ರಿ.ಪೂ. ಕಾಲದಿಂದಲೂ ಕೃಷಿಗೆ ಹೆಚ್ಚು ಮಹತ್ವವಿದೆ. ವೇದ–ಉಪನಿಷತ್ತು ಕಾಲದಲ್ಲೂ ನಾವು ಕೃಷಿಯ ಬಗ್ಗೆ ಇರುವ ಹಲವು ನೆಲೆಗಳನ್ನು ತಿಳಿಯುತ್ತೇವೆ. ಒಂದು ದೇಶದ ಅಭಿವೃದ್ಧಿಯನ್ನು ತಿಳಿಯಬೇಕಾದರೆ ನಾವು ಆ ದೇಶದ ಆರ್ಥಿಕ ವ್ಯವಸ್ಥೆಯನ್ನು ಅರಿತರೆ ಮಾತ್ರ ಸಾಧ್ಯ. ಇತಿಹಾಸದ ಪುಟಗಳನ್ನು ತಿರಿವಿ ನೋಡಿದರೆ ರಾಜ್ಯರು ಹೆಚ್ಚಿನ ಒತ್ತು ಕೃಷಿಗೆ ನೀಡಿರುವುದು ನೋಡುತ್ತೇವೆ. ಆರ್ಥಿಕವಾಗಿ ಯಾವ ರಾಜ್ಯವು ಸುಭದ್ರವಾಗಿತ್ತೋ ಅಂತಹ ರಾಜ್ಯದ ಏಳಿಗೆ ಉತ್ತಮ ರೀತಿಯದ್ದಾಗಿತ್ತು ಎನ್ನುವುದು ಇತಿಹಾಸ ತಿಳಿಸುತ್ತದೆ. ಹಿಂದಿನ ಕಾಲದಿಂದಲೂ ಹೈದ್ರಾಬಾದ ಕರ್ನಾಟಕಕ್ಕೆ ತನ್ನದೆ ಆದ ಚರಿತ್ರೆ ಇದೆ. ಇದು ಬಯಲು ಪ್ರದೇಶ ಇಲ್ಲಿಯ ಜನರು ಮಳೆಯನ್ನೆ ಆಧರಿಸಿರುವಂತವರು. ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಆರ್ಥಿಕ ಜೀವನಕ್ಕೆ ಹೆಚ್ಚು ಮಹತ್ವ ಕೊಟ್ಟಿರುವುದು ಅರಿವಾಗುತ್ತದೆ. ೧೨ನೇ ಶತಮಾನದ ಸಾಹಿತ್ಯ ಓದುವ ಸಂದರ್ಭದಲ್ಲಿ ಶರಣರು ಕಾಯಕ ತತ್ವಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದು ನೋಡುತ್ತೇವೆ. ಶರಣರ ಆರ್ಥಿಕ ಜೀವನ ಎನ್ನುವುದು ಅತ್ಯಂತ ಸುವ್ಯವಸ್ಥಿತವಾಗಿತ್ತು. ಸಾಮಾಜಿಕ ಜೀವನ ಮತ್ತು ಧಾರ್ಮಿಕ ಜೀವನ ಎರಡು ಸರಿಯಾದ ನಿಲ್ಲುವುಗಳಿಂದ ಕೂಡಿರಬೇಕಾದರೆ ಅಲ್ಲಿ ಆರ್ಥಿಕ ಜೀವನ ಚೆನ್ನಾಗಿರಬೇಕು ಅಂದರೆ ಮಾತ್ರ ಮನುಷ್ಯನ ಏಳಿಗೆ ಸಾಧ್ಯ. ಕನ್ನಡ ಕಾದಂಬರಿಗಳು ಅಥವಾ ಪ್ರಾದೇಶಿಕ ಕಾದಂಬರಿಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಆರ್ಥಿಕ ಜೀವನ ಸರಿಯಾದ ನಿಲ್ಲುವಿನಿಂದ ಬಿಡಿಸದೆ ಹೋಗಿದ್ದರೆ ಅಂತಹ ಕಾದಂಬರಿಯು ಪ್ರಾದೇಶಿಕ ಕಾದಂಬರಿಯಾಗಲಿ, ಮಹಾ ಕಾದಂಬರಿಯಾಲಿ ಅನಿಸಿಕೊಳ್ಳಲಾರದು. ಹೈದ್ರಾಬಾದ ಕರ್ನಾಟಕದ ಪ್ರಾದೇಶಿಕ ಕಾದಂಬರಿಗಳಲ್ಲಿ ಆರ್ಥಿಕ ಜೀವನವು ಗ್ರಾಮೀಣರ ಬದುಕಿನ ನೆಲೆಯನ್ನು ಮುಖ್ಯವಾಗಿ ಇಟ್ಟುಕೊಂಡು ಮೂಡಿಬಂದಿರುವುದು ಕಂಡುಬರುತ್ತದೆ. "ಸಮಕಾಲೀನ ಚರಿತ್ರೆಕಾರರು ಮತ್ತು ವಿದೇಶಿಯರ ಬರಹಗಳಿಂದ ಆಗಿನ ಆರ್ಥಿಕ ಸ್ಥಿತಿಯನ್ನು ಅರಿಯಲು ಸಾಧ್ಯವಾಗುತ್ತದೆ. ಕೃಷಿ ಉದ್ದಿಮೆ, ಗೃಹ ಕೈಗಾರಿಕೆ, ವ್ಯಾಪಾರ ಮುಂತಾದ ಕ್ಷೇತ್ರಗಳಲ್ಲಿ ಬೆಳವಣಿಗೆಯನ್ನು ಸಾಧಿಸಿ ಆರ್ಥಿಕ ಮಟ್ಟವನ್ನು ಹೆಚ್ಚಿಸಲಾಯಿತು"(ಹೂಗಾರ: ೧೫೩: ೨೦೦೭) ನಾವು ಒಂದು ದೇಶದ ಅಭಿವೃದ್ಧಿಯನ್ನು ಅರಿಯಲು ಮೊದಲು ಆ ದೇಶದ ಆರ್ಥಿಕ ಬೆಳವಣಿಗೆಯನ್ನು ತಿಳಿಯುತ್ತೇವೆ. ಇದೇ ರೀತಿಯಾಗಿ ಹೈದ್ರಾಬಾದ ಕರ್ನಾಟಕವು ಹೆಚ್ಚು ಕೃಷಿಯನ್ನು ಅವಲಂಬಿಸಿರುವಂತಹದು. ಇಲ್ಲಿಯ ಗ್ರಾಮೀಣರು ಮುಖ್ಯವಾಗಿ ತೊಗರೆ, ಜೋಳ, ಕಡಲೆ, ಶೇಂಗಾ, ಎಳ್ಳು, ಬೆಳೆಗಳನ್ನು ಬೆಳೆಯುವರು. ಇದರ ಜೊತೆಗೆ ಇನ್ನೂ ಹಲವು ಬೆಳೆಗಳನ್ನು ಕೃಷಿಯಿಂದಲೇ ಬೆಳೆಯುವರು. ಹೈದ್ರಾಬಾದ ಕರ್ನಾಟಕವು ಇತರ ಪ್ರದೇಶಗಳಿಗೆ ಹೋಲಿಸಿ ನೋಡಿದರೆ ಆರ್ಥಿಕವಾಗಿ ಅಷ್ಟೇನು ಶ್ರೀಮಂತವಾಗಿಲ್ಲ. ಆದರು ಈ ಪ್ರದೇಶದ ಜನರ ಸ್ವಾತಂತ್ರ್ಯ ಪೂರ್ವದ ನಿಜಾಮಶಾಹಿಯ ಆಡಳಿತದ ತುಳಿತದಲ್ಲಿ ಹೇಗೆ ಜೀವಿಸಿದರು ಮತ್ತು ಕೃಷಿ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬಂದ ಬಗೆಯನ್ನು ಶಾಂತರಸರ ಸಣ್ಣಗೌಡಸಾನಿ, ಗೀತಾ ನಾಗಭೂಷಣರ ಬದುಕು, ಚೆನ್ನಣ್ಣ ವಾಲೀಕಾರರ ಹುಲಿಗೆಮ್ಮ, ಗ್ರಾಮಭಾರತ, ಕುಂ. ವೀರಭದ್ರಪ್ಪನವರ ಶಾಮಣ್ಣ, ಬೇಲಿಯ ಹೂಗಳು, ಅರಮನೆ ಕಾದಂಬರಿಗಳು ಮತ್ತು ಜಯತೀರ್ಥ ರಾಜ ಪುರೋಹಿತ, ಚಂದ್ರಕಾಂತ ಕುಸುನೂರರ ಕಾದಂಬರಿಗಳಲ್ಲಿ ಈ ಭಾಗದ ಜನರ ಆರ್ಥಿಕ ಮಟ್ಟವು ಹೇಗೆ ಇತ್ತು ಎಂಬುವು ಅನಾವರಣಗೊಳಿಸಿದ್ದಾರೆ. ಹೈದ್ರಾಬಾದ ಕರ್ನಾಟಕದ ಪ್ರಾದೇಶಿಕ

ಕಾದಂಬರಿಗಳನ್ನು ಅವಲೋಕಿಸಿದರೆ ಇಲ್ಲಿನ ಆರ್ಥಿಕ ಪರಿಕರಗಳು ಯಾವ–ಯಾವ ನೆಲೆಗಳನ್ನೊಳಗೊಂಡಿವೆ ಎಂಬುದು ತಿಳಿಯುತ್ತದೆ.

## 1.ಆರ್ಥಿಕ ವ್ಯವಸ್ಥೆ(Economic Status)

ಹೈದ್ರಾಬಾದ ಕರ್ನಾಟಕವು ನಿಸರ್ಗದ ಮೂಲ ಸೌಕರ್ಯಗಳಿಂದ ಕಂಗೋಳಿಸುವ ಸಮೃದ್ಧ ಸಂಪನ್ನವಾದ ಪ್ರದೇಶ. ಈ ಭಾಗದಲ್ಲಿ ಕಪ್ಪು ಮಣ್ಣು, ಎರೆ ಮಣ್ಣಿನ ಭೂಮಿಯು ಫಲವತ್ತಾದುದು. ಗುಡ್ಡಗಳು ಬಹುಮುಖ್ಯ ಸಂಪನ್ಮೂಲ ಧಾತುಗರ್ಭಿತವಾದವುಗಳು. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಅಷ್ಟೇನು ವಿಸ್ತಾರವಾದ ಕಾಡುಗಳು ಕಂಡುಬರುವುದಿಲ್ಲ. ಆದರು ಈ ಭಾಗದಲ್ಲಿ ವನಸ್ಪತಿ ವೈಭವದಿಂದ ಕೂಡಿರುವುದು ನೋಡುತ್ತೇವೆ. ಹೈದ್ರಾಬಾದ ಕರ್ನಾಟಕವು ಹೊಳೆಗಳು, ಹಳ್ಳ, ಭಾವಿಗಳು ನೀರಾವರಿ ಮಾಡಲು ಯೋಗ್ಯವಾದ ಸೌಕರ್ಯಗಳಾಗಿವೆ. ಸುತ್ತ–ಮುತ್ತಲಿನ ರಾಜ್ಯಗಳು ವ್ಯಾಪರಕ್ಕೂ ಸಂಚಾರಕ್ಕೂ ಸಹಾಯಕವಾಗಿವೆ. ವಾಯುಗುಣವನ್ನು ನೋಡಿದರೆ ಇಲ್ಲಿ ಬಿಸಿಲು ಹೆಚ್ಚು. ಆದರು ಆರೋಗ್ಯ ಬಲಸಂವರ್ಧಕವಾದುದ್ದು. ಚಾರಿತ್ರಿಕವಾಗಿ ಹಿಂದಿನ ಕಾಲದಿಂದಲೂ ನೋಡಿದರೆ ಕೃಷಿವರ್ಗ ಸುಸ್ಥಿತಿಯಲ್ಲಿದ್ದಿತ್ತು. ಮೊದಲಿನಿಂದಲೂ ಇಲ್ಲಿಯ ಜನರು ಹಿಂಗಾರು ಮತ್ತು ಮುಂಗಾರು ಮಳೆಗಳು ಅನುಕೂಲವಾಗಿದ್ದವು ಎಂದು ಹೇಳಿರುವುದು ತಿಳಿಯುತ್ತದೆ. ಈ ಭಾಗದ ಕಾದಂಬರಿಗಳಲ್ಲಿ ತಿಳಿದು ಬರುವಂತೆ ಆರ್ಥಿಕ ಜೀವನವು ಸಮಾಜದ ಸಹ ಜೀವನವಾಗಿತ್ತು. ಒಬ್ಬರ ಹೊಲಕ್ಕೆ ಒಬ್ಬರು ಬಂದು ಕೆಲಸ ಮಾಡುವುದು ಒಬ್ಬರ ಹೊಲದಲ್ಲಿ ಬೆಳೆದ ಬೆಳೆಗಳು ಬೇರೆಯವರ ಹೊಲದಲ್ಲಿ ಬೆ೦ಳೆದ ಬೇರೆ ಬೆಳೆಗಳೊಂದಿಗೆ ಬದಲಾಯಿಸಿಕೊಳ್ಳುವುದು. ಕೂಲಿಕಾರ್ಮಿಕರು, ಜೀತದಾಳು, ಮಾಲೀಕರು, ಎಂಬ ನಿಲುವಿನಿಂದ ಜನರು ಸುವ್ಯವಸ್ಥಿತವಾದ ಜೀವನ ನಡೆಸುತ್ತಿದರು. ಆರ್ಥಿಕವಾಗಿ ಅಷ್ಟೇನು ಈ ಭಾಗ ಬಲಿಷ್ಠವಾಗಿದಿಲ್ಲವಾದರು ಗ್ರಾಮೀಣ ಜನರಲ್ಲಿ ನಮ್ಮವರು, ನಮ್ಮದು ಎಂಬ ಒಂದು ಅನೋನ್ಯವಾದ ಬಂಧನವಿತ್ತು.

“ಆಧುನೀಕರಣ, ಶಿಕ್ಷಣ, ಔದ್ಯೋಗೀಕಣ, ವಿಜ್ಞಾನ ಹಾಗೂ ತಂತ್ರಜ್ಞಾನಗಳ ಬೆಳವಣಿಗೆಯ ಫಲವಾಗಿ ಗ್ರಾಮೀಣರ ಬದುಕು ಯಾಂತ್ರೀಕರಣಗೊಂಡಿದೆ. ಇದರಿಂದ ಅವರ ಆರ್ಥಿಕ ವ್ಯವಸ್ಥೆಯ ಮೇಲೆ ತೀವ್ರ ಪರಿಣಾಮ ಉಂಟಾಗಿರುವುದನ್ನು ಕಾಣಬಹುದು. ಹಳ್ಳಿಗಳಲ್ಲಿ ಪರಂಪರೆಯಿಂದ ಅನುಸರಿಸುತ್ತ ಬಂದ ವ್ಯವಸಾಯ ಹಾಗೂ ಅದಕ್ಕೆ ಪೂರಕವಾದ ಕಸುಬುಗಳಲ್ಲಿ ತೀವ್ರ ಬದಲಾವಣೆಗಳಾಗಿ ಆದಾಯದಲ್ಲಿ ಸಾಕಷ್ಟು ಏರುಪೇರುಗಳಾದವು. ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಜನರು ಇತರ ಮೂಲಗಳನ್ನು ಅವಲಂಬಿಸಬೇಕಾಯಿತು”(ಖಂಡೋಬಾ: ೨೭: ೧೯೯೯). ಇಂದಿನ ಆಧುನಿಕ ಗ್ರಾಮೀಣ ಪ್ರದೇಶದ ಜನ ಜೀವನವು ತುಂಬಾ ಬದಲಾಗಿದೆ. ಅವರ ಬದುಕು ಶಿಕ್ಷಣ, ಔದ್ಯೋಗೀಕರಣ ಮತ್ತು ತಂತ್ರಜ್ಞಾನದ ಬಳಕೆ೦ಯಿಂದ ಯಾಂತ್ರಿಕ ಜೀವನಕ್ಕೆ ಕಾಲಿಟ್ಟಿದ್ದಾರೆ. ಮೊದಲು ಯಾವುದೇ ತಂತ್ರಜ್ಞಾನದ ಬಳಕೆ ಇದ್ದಿರಲಿಲ್ಲ ಅದಕ್ಕಾಗಿ ಆರ್ಥಿಕ ವ್ಯವಸ್ಥೆಯು ಅಷ್ಟು ಸುಧಾರಣೆಯಾಗಲಿ, ಬೆಳವಣಿಗೆಯಾಗಲಿ ಹೊಂದಿರಲಿಲ್ಲ. ಗ್ರಾಮೀಣರು ಹಳ್ಳಿಗಳನ್ನು ಬಿಟ್ಟು ನಗರ ಪ್ರದೇಶಗಳನ್ನು ಸೇರುತ್ತಿದ್ದಾರೆ. ಕೃಷಿಯು ಮೂಲ ಕಸುಬು ಎಂದು ನಂಬಿದ ರೈತನು ಭೂಮಿಯ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಅದಕ್ಕೆ ಕಾರಣ ಹುಡುಕುತ್ತಾ ಹೋದಾಗ ನೈಸರ್ಗಿಕ ಅಸಮತೋಲನವೆ ಆಗಿದೆ. ಸರಿಯಾದ ಸಮಯದಲ್ಲಿ ಮಳೆ ಬರುವುದಿಲ್ಲ ಮತ್ತು ಹವಾಮಾನದಲ್ಲಿ ದಿನೆ ದಿನೆ ಏರುಪೇರುಗಳು ಸಂಭವಿಸುತ್ತಿವೆ. ಹೀಗಾಗಿ ಮಾನವರು ಯಂತ್ರ ಬದುಕಿಗೆ ಹೊಂದಿಕೊಳ್ಳುವ ಪ್ರಯತ್ನ ಇಂದು ನಡೆಯುತ್ತಿದೆ. ಗ್ರಾಮೀಣ ಜನರು ಮೊದಲು ಕೃಷಿಯೊಂದಿಗೆ ಇನ್ನೂ ಹಲವು ಕಸುಬುಗಳನ್ನು ಮಾಡುತ್ತಿದರು. ಹೀಗಾಗಿ ಅವರು ತಮ್ಮ ಆರ್ಥಿಕ ಜೀವನ ಸುಧಾರಿಸಲು ಇವುಗಳು ಸಹಾಯಕವಾಗುತ್ತಿದ್ದವು.

ಹಾಗೆ ನೋಡಿದರೆ ಹಳ್ಳಿಗಳಿಂದ ತುಂಬಿದ ಹೈದ್ರಾಬಾದ ಕರ್ನಾಟಕದ ಪ್ರದೇಶದಲ್ಲಿ ಕೃಷಿಯು ಪ್ರಧಾನ ಉದ್ಯೋಗವಾಗಿದೆ ಎಂದು ಹೇಳಬೇಕು. ಇದಕ್ಕೆ ಅನುಗುಣವಾಗಿ ಹೈನುಗಾರಿಕೆ, ಕೋಳಿ, ಕುರಿ, ಮೀನು ಸಾಕಾಣಿಕೆ, ಹಂದಿ ಸಾಕಾಣಿಕೆ, ಜೇನು ಸಾಕಾಣಿಕೆ ಇವು ಗ್ರಾಮೀಣರ ಬದುಕಿನಲ್ಲಿ ಹಿಂದಿನಿಂದಲೂ ನಡೆದುಬಂದ ಕುಲಕಸುಬುಗಳಾಗಿವೆ. ಇದರ ಜೊತೆಗೆ ಗುಡಿ ಕೈಗಾರಿಕೆಗಳು ಹಳ್ಳಿಯಲ್ಲಿ ಕಂಡುಬರುತ್ತವೆ. ಸಾಮಾಜಿಕ ಭದ್ರತೆಯನ್ನು ಹೊಂದುವ ಸಲುವಾಗಿ ಮತ್ತು ಆರ್ಥಿಕ ಭದ್ರತೆಯನ್ನು ಪಡೆಯುವುದಕ್ಕಾಗಿಯೇ ಗ್ರಾಮೀಣರು ಅನುಸರಿಸಿದ ಕುಲಕಸುಬುಗಳು ಅನಿವಾರ್ಯತೆಯಿಂದ ಕೂಡಿರುವಂತಹವುಗಳು, ಈ ಭಾಗದ ಕಾದಂಬರಿಗಳಲ್ಲಿ ಕಾದಂಬರಿಕಾರರು ತಮಗೆ ಏಟುಕಿದ ರೀತಿಯಲ್ಲಿ ತಮ್ಮ ಬರಹದ ಮೂಲಕ ಚಿತ್ರಿಸಿರುವುದು ಕಂಡುಕೊಳ್ಳುವೆವು.

“ಗ್ರಾಮಗಳಲ್ಲಿ ಕೃಷಿ ಉದ್ಯೋಗಿಗಳನ್ನು ಒಕ್ಕಲಿಗರೆಂದು, ಒಕ್ಕಲುತನವನ್ನು ಅವಲಂಬಿಸಿ ಇತರ ಕಸಬುಗಳನ್ನು ಹೊಂದಿರುವವರನ್ನು ಆಯಗಾರರೆಂದು ಕರೆಯುತ್ತಾರೆ. ಆ ‘ಆಯ’ ಪದ್ಧತಿಯು ಒಂದು ಸಾಂಪ್ರದಾಯಿಕ ವ್ಯವಸ್ಥೆಯಾಗಿದ್ದು, ಕೃಷಿಕಾರ್ಯಗಳಿಗೆ ಬೇಕಾಗುವ ಅಗತ್ಯ ವಸ್ತುಗಳು ಪೂರೈಸಿ ಕೃಷಿಕನಿಂದ ನಿಶ್ಚಿತ ಆದಾಯವನ್ನು ಪಡೆದುಕೊಳ್ಳಲಾಗುತ್ತದೆ.”(ಅದೇ: ೨೭: ೧೯೯೯) ಗ್ರಾಮೀಣ ಪ್ರದೇಶದಲ್ಲಿ ಸಂಪ್ರದಾಯದಂತೆ ಹರಿದು ಬಂದ ಪರಂಪರೆಯನ್ನು ಕಾಣುತ್ತೇವೆ. ರೈತನು ತನ್ನ ಕೃಷಿಗೆ ಸಹಾಯ ಮಾಡಿದ ಬಡಿಗ, ಕಂಬಾರ, ಚಮ್ಮಾರ ಇವರಿಗೆ ಆಯ ಪದ್ಧತಿ ನೀಡುವುದು, ಇದರ ಜೊತೆಗೆ ಗುಡಿಯ ಪೂಜಾರಿ, ಬಡವರು, ನಿರ್ಗತಿಕರು, ಈ ಆಯ ಪದ್ಧತಿಯನ್ನು ಪಡೆಯುತ್ತಾರೆ. ರೈತ ತಾನು ಬೆಳೆದಿರುವುದರಲ್ಲಿ ಹಂಚಬೇಕು ಅಂದರೆ ಮಾತ್ರ ಭೂದೇವಿ ತನಗೆ ನಂಬುವಳು ಎಂಬ ನಂಬಿಕೆಯಿಂದ ದಾನ, ಧರ್ಮ ಮಾಡುವನು. ರೈತನು ಆಯದ

VOLUME - 8 | ISSUE - 5 | FEBRUARY - 2019

ಜೊತೆಗೆ ಮುಯಿ, ಜೀತ ಪದ್ಧತಿಯನ್ನು ಕೃಷಿಯಲ್ಲಿನ ಜೀವನಕ್ಕಾಗಿ ಬಳಸಿಕೊಳ್ಳುವುದನ್ನು ಗ್ರಾಮೀಣ ಕೃಷಿ ಕಾರ್ಮಿಕರಲ್ಲಿಯ ನಡೆದು ಬಂದಿರುವುದು. ಹೀಗಾಗಿ ಕೃಷಿ ಬದುಕಿನ ಸಹ ಜೀವನ ವ್ಯವಸ್ಥೆ ಸುವ್ಯವಸ್ಥಿತವಾಗಿರುವುದು.

ಹೈದ್ರಾಬಾದ ಕರ್ನಾಟಕದ ಪ್ರಾದೇಶಿಕ ಕಾದಂಬರಿಗಳು ಅಧ್ಯಯನ ಮಾಡಿದಾಗ ಇಲ್ಲಿ ಗ್ರಾಮೀಣರ ಆರ್ಥಿಕ ಜೀವನ, ಕೃಷಿ, ಕೂಲಿ ಪದ್ಧತಿ, ಆಯ ಪದ್ಧತಿ, ಕುಲಕಸುಬು, ಮುಯಿ ಇಂಥಹ ಹಲವು ರೀತಿಯ ಸಹ ಜೀವನದ ಬದುಕು ಕಂಡುಬರುತ್ತದೆ. ಹೈದ್ರಾಬಾದ ಕರ್ನಾಟಕ ಅಷ್ಟೇನು ತಂಪಾದ ಪ್ರದೇಶವಲ್ಲ. ಇದು ಹೆಚ್ಚು ದಟ್ಟವಾದ ಅರಣ್ಯ ಪ್ರದೇಶವು ಅಲ್ಲ. ಹೀಗಾಗಿ ಮಳೆ ಕಡಿಮೆ ಎಂದೇ ಹೇಳಬೇಕು. ಈ ಭಾಗದ ರೈತರು ಹಿಂಗಾರು ಮತ್ತು ಮುಂಗಾರು ಬೆಳೆಗಳು ಹೆಚ್ಚು ಮಳೆಯನ್ನೇ ಅವಲಂಬಿಸಿರುತ್ತಾರೆ. ನಿಸರ್ಗದ ಪರಿಕರಗಳಿಂದ ಮತ್ತು ಮಾನವ ಪ್ರಯತ್ನಗಳಿಂದ ರೈತ ತನ್ನ ಕೃಷಿಯ ಜೀವನವನ್ನು ಸುಧಾರಿಸುವನು. ಸಾಮಾಜಿಕ ಸಮಷ್ಠಿ ಜೀವನದ ಬದುಕಿನ ಶ್ರಮವನ್ನು ಪ್ರತ್ಯೇಕವಾಗಿ ವಿಭಾಗಿಸಿಕೊಂಡು ಕಾರ್ಯಗಳಲ್ಲಿ ತತ್ಪರವಾಗಿದುವುದು ನೋಡುತ್ತೇವೆ. ಉತ್ಪಾದಕತೆಗೂ ಶ್ರಮ ವಿಭಜನೆಗೂ ಅನೋನ್ಯವಾದ ನಂಟಿದೆ. ಅದನ್ನು ಕೃಷಿಕ, ಕೂಲಿಕಾರ, ಮಾಲಿಕ ಇವರುಗಳ ಸಂಬಂಧದಲ್ಲಿ ಚೆನ್ನಾಗಿ ಕಾದಂಬರಿಕಾರರು ವ್ಯಕ್ತಪಡಿಸಿದ್ದಾರೆ. ಹೈದ್ರಾಬಾದ ಕರ್ನಾಟಕದ ಗ್ರಾಮೀಣರ ಆರ್ಥಿಕ ವ್ಯವಸ್ಥೆಯನ್ನರಿಯಲು ಈ ಭಾಗದ ಪ್ರಾದೇಶಿಕ ಕಾದಂಬರಿಗಳು ಮುಖ್ಯವಾದ ಮೂಲ ಸಾಮಗ್ರಿಯನ್ನು ಒದಗಿಸುತ್ತವೆ. ಇಂಥ ಕಾದಂಬರಿಗಳ ಅಧ್ಯಯನದಿಂದ ಆರ್ಥಿಕ ವ್ಯವಸ್ಥೆಯನ್ನು ಬಿಡಿ–ಬಿಡಿಯಾಗಿ ಮತ್ತು ಇಡಿಯಾಗಿ ಚಿತ್ರಣವನ್ನು ಕಟ್ಟಿಕೊಳ್ಳಬಹುದು.

## 2. ಒಕ್ಕಲುತನ (ಕೃಷಿ)(Agriculture System)

ಹೈದ್ರಾಬಾದ ಕರ್ನಾಟಕದ ಪ್ರಾದೇಶಿಕ ಕಾದಂಬರಿಗಳಲ್ಲಿ ಮೂಡಿಬಂದಿರುವಂತೆ ಕೃಷಿ ಕರ್ಮ ಭೂಮಿ ಸುಸ್ಥಿತಿಯಲ್ಲಿವೆ. ಹೀಗಾಗಿ ಇಲ್ಲಿ ಹಿಂಗಾರು ಮುಂಗಾರು ಮಳೆಗಳು ಅನೂಕೂಲವಾಗಿದ್ದರಿಂದ ಜನರಿಗೆ ಯಾವುದೇ ತೊಂದರೆಯಾಗಿರುವುದಿಲ್ಲ. ಕೆಲವು ಸಂದರ್ಭದಲ್ಲಿ ಮಾತ್ರ ಕ್ಷಾಮ, ಬರಗಾಲ ಬಂದಿರುವುದು ತಿಳಿದು ಬರುತ್ತದೆ. ಹೊಲಗಳಲ್ಲಿ ಗ್ರಾಮೀಣರು ಸರಿಯಾಗಿ ಉಳುಮೆಯನ್ನು ಮಾಡಿ ವಿವಿಧ ಬೆಳೆಗಳನ್ನು ರಸವತ್ತಾಗಿಯೂ ಸಮೃದ್ಧಿಯಾಗಿಯೂ ಬೆಳೆಯುತ್ತಿದ್ದರು. "ಒಕ್ಕಲುತನ ಕರ್ನಾಟಕದ ಗ್ರಾಮೀಣ ಜನತೆಯ ಪ್ರಮುಖ ಜೀವನೋಪಾಯವಾಗಿದೆ. ಕೃಷಿ ಕಾರ್ಯದಲ್ಲಿ ನಿರತರಾದ ಜನ ಸಮುದಾಯವನ್ನು ಒಕ್ಕಲಿಗರೆಂದು ಕರೆಯಲಾಗುತ್ತದೆ. ಈ ಒಕ್ಕಲಿಗರು ಎಲ್ಲ ಪ್ರದೇಶ ಹಾಗೂ ಜಾತಿಗಳಲ್ಲಿದ್ದಾರೆ. ಆದರೆ ಮಲೆನಾಡು, ಬಯಲುಸೀಮೆ(ದಕ್ಷಿಣ)ಯಲ್ಲಿ, ಒಕ್ಕಲಿಗರದೊಂದು ಜಾತಿಯೇ ಇದೆ. ಬಹುಶಃ 'ಒಕ್ಕು' ಎಂಬ ಕೃಷಿ ಪರವಾದ ಪದದಿಂದ ಅವರಿಗೆ ಈ ಹೆಸರು ಬಂದಿರಬೇಕು. 'ಅವರು ಒಂದು ಕಾಲಕ್ಕೆ ವ್ಯವಸಾಯ ಉದ್ಯೋಗವನ್ನು ಮಾಡಿಕೊಂಡಿರುವುದರಿಂದ 'ಒಕ್ಕಲಿಗರು' ಎಂಬ ವೃತ್ತಿ ಮೂಲ ಜನಾಂಗ ಸಿದ್ಧವಾಗಿರಬೇಕು."(ಅಂಬಳಿಕೆ: ೧೨: ೧೯೭೮) ಹೈದ್ರಾಬಾದ ಕರ್ನಾಟಕದಲ್ಲಿ ಒಕ್ಕಲುತನ ಮಾಡುವವರು ಬೇರೆ–ಬೇರೆ ವರ್ಗದ ಜನರಾಗಿರುವುದು ಕಾಣುತ್ತೇವೆ. ವೀರಶೈವರು, ಕುರುಬರು, ಜೈನರು, ಮುಸ್ಲಿಂರು, ಪಂಚಮಸಾಲಿಯರು, ಲಂಬಾಣಿಗರು ಹೀಗೆ ಮುಂತಾದವರು ಈ ಭಾಗದಲ್ಲಿ ಒಕ್ಕಲುತನವೇ ಮುಖ್ಯ ಉದ್ಯೋಗವನ್ನಾಗಿ ಅವಲಂಬಿಸಿದ್ದಾರೆ. ಬ್ರಾಹ್ಮಣರು ಭೂಮಿಯನ್ನು ಹೊಂದಿದ್ದರು ಅವರು ಬೇರೆಯವರಿಂದ ಊಳಿಮೆಯನ್ನು ಮಾಡಿಸುವರು. ಗ್ರಾಮೀಣರಲ್ಲಿ ಗೌಡ, ಕುಲಕರ್ಣಿ, ಸಾವುಕಾರರು ಹೆಚ್ಚು ಭೂಮಿಯನ್ನು ಹೊಂದಿರುವಂಥವರು. ಇವರ ಹತ್ತಿರವೇ ಕಾರ್ಮಿಕರು ಕೂಲಿಮಾಡುವುದು, ಜೀತದುಡಿಯುವುದು ಕಂಡು ಬರುತ್ತದೆ. ಹೈದ್ರಾಬಾದ ಕರ್ನಾಟಕದ ಹಲವು ಕಾದಂಬರಿಗಳಲ್ಲಿ ತಿಳಿಸಿರುವಂತೆ ಸಮಾಜದಲ್ಲಿ ಆರ್ಥಿಕವಾಗಿ ಮುಂದುವರೆಯಲು ಗ್ರಾಮೀಣ ಜನಾಂಗ ಕೃಷಿಯನ್ನೇ ಮಾಡುವರು, ಮತ್ತು ಭೂಮಿಯನ್ನು ಎಲ್ಲಾ ಜನಾಂಗದವರು ಹೊಂದಿರುವುದು ನೋಡುತ್ತೇವೆ. ಇದು ಈ ಭಾಗದ ವಿಶೇಷತೆಯಾಗಿದೆ.

"ಥಾಮಸಮನ್ರೋ ಸಾಹೇಬನು ರಾಚೋಟಿ ಜಮೀಂದಾರನಾದ ಕಿರುಕಲ ಕೋನರೆಡ್ಡಿಯ ಗಾದೆಯನ್ನು ಕಬಜಾ ಮಾಡಿ ಆತನ ಒಡೆತನದಲ್ಲಿದ್ದ ಮೂರು ಸಾವಿರದಾಯೆಂಟುನೂರಾ ಮುವ್ವತ್ತೊಂದು ಯಕರೆ ಜಮೀನಿನ ಪಯ್ಕಿ ಯಡ್ಡೂವರೆ ಸಾವಿರ ಯಕರೆ ಭೂಮಿಯನ್ನು ಅದೇ ಗ್ರಾಮದ ಭೂಹೀನರಿಗೆ ಹಂಚಬೇಕೆಂದು ತೀರುಮಾನಿಸಿದನು. ಅಂಥ ಭೂಹೀನರ ಪಯ್ಕಿ ಒಬ್ಬನಾಗಿದ್ದ ಕಿಷ್ಣಯ್ಯನು ಕಲೆಟ್ರು ಸಾಹೇಬನೆದುರು ಯಿನಯ ಪೂರಕವಾಗಿ ನಿಂತು 'ಅಯ್ಯಾ ನಾನು ಮಕ್ಕಳೊಂದಿಗ ನಿದ್ದೇನೆ.. ದುಡಿದುಂಬಲಕ ಭೂಮಿಯಿಲ್ಲದ ಕಾರಣಕ ಕಳ್ಳತನ ಮಾಡಿ ಸಂಸಾರ ಸಲುವುತ್ತಿದ್ದೇನೆ ತಾವು ನನಗೂ ವುಳುಮೆ ಮಾಡಲಕ ಜಮೀನು ಮಂಜೂರು ಮಾಡಿದಲ್ಲಿ ಕಳ್ಳತನ ಬಿಟ್ಟು ಮ್ಯಯಿ ಮುರುದು ದುಡಿವುತ ಗವುರವದಿಂದ ಬದುಕುವೆನು"(ಕುಂ.ವೀ: ೨೨,೨೩: ೨೦೦೮). ಅರಮನೆ ಕಾದಂಬರಿಯಲ್ಲಿ ಹೇಳಿರುವಂತೆ ಥಾಮಸು ಮನ್ರೋ ಹೇಳುವಂತೆ ಭೂಮಿಯೂ ಯಾರ ಸೋತು ಅಲ್ಲ ಅದು ಎಲ್ಲರು ದುಡಿಯುವಂಥದು. ಜಮೀನದಾರನು ಜನರಿಂದ ಬಲತಕಾರವಾಗಿ ಭೂಮಿಯನ್ನು ಕಬಜಾ ಮಾಡಿಕೊಂಡಿದ್ದ ಇದು ಸರಿಯಲ್ಲ ಯಂದು ಎಲ್ಲಾ ಜನರಿಗೂ ಮನ್ರೋ ಭೂಮಿ ಹಂಚಿದ. ಭೂಮಿ ಇಲ್ಲದ ಜನರು ಮತ್ತೆ ಉಳುಮೆ ಮಾಡುವಂತೆ ಸಹಾಯ ಮಾಡಲಾಯಿತು. "ಬೆಳಚುಕ್ಕೆ ಮೂಡಿದ್ದು ನೋಡಿ ಹಿಂಗಾರಿ ಬಿತ್ತುವವರೆಲ್ಲರೂ ಎದ್ದರು. ಬುಕ್ಕ, ಕೂರಿಗೆ, ಉಡಿಚೀಲ, ಗಳೆಸಾಮಾನು, ಎತ್ತುಗಳನ್ನು ಹೊಡಕೊಂಡು ಬಿತ್ತ ಬೀಜದ ಜೊತೆಗೆ ಹೊರಟರು. ಬೆಳಗಾಗುವುದರೊಳಗಾಗಿ ಊರಿಗೂರೆ ಕಾಲಿಯಾಗಿ ಹೋಗಿತ್ತು. ಕಲ್ಯಾಣಮ್ಮ ಗೌಡತಿ ಎದ್ದು ಹಾಲು ಬಿಟ್ಟುಕೊಂಡು ಒಳಗೆಹೋದ್ದಳು. ಸಂಗಣ್ಣಗೌಡ ಆಳುಗಳ ಹಿಂದೆ ಬಿತ್ತಲಿಕ್ಕೆ ಹೋಗಿದ್ದನು."(ವಾಲೀಕಾರ: ೨೧: ೨೦೦೨) ಡಾ.ಚೆನ್ನಣ್ಣ ವಾಲೀಕಾರರು ಒಂದು ಹೆಣ್ಣಿನ ಒಳಜಗತ್ತು ಕಾದಂಬರಿಯಲ್ಲಿ ತಿಳಿಸುವಂತೆ ಒಬ್ಬ ರೈತ ಮುಂಜಾನೆ ಎದ್ದಕೂಡಲೆ ಮಾಡಬೇಕಾದ ಕೆಲಸ ಹೇಗಿರುತ್ತದೆ ಎಂದು ಇಲ್ಲಿ ತಿಳಿಸಿದ್ದಾರೆ. ಸಂಗಣ್ಣಗೌಡ

ಉಳಿಮೆಯನ್ನು ಮಾಡುವವನಲ್ಲ ಆಳುಗಳನ್ನು ಜೀತಕ್ಕಾಗಿ ಇಟ್ಟುಕೊಂಡಿದ್ದಾನೆ. ಆಳುಗಳು ಸರಿಯಾಗಿ ಕೆಲಸ ಮಾಡಲಿ ಎಂದು ಅವರ ಹಿಂದೆಯೇ ಹೊಲಕ್ಕೆ ಹೋಗುವವನು. ಇಲ್ಲಿ ಗೌಡ ಭೂಮಿ ಬೆಳೆದರೆ ನಾನು ಸುಖವಾಗಿ ಇರಲು ಸಾಧ್ಯ ಎಂದು ನಂಬಿದಂತವನು. ಗ್ರಾಮೀಣರಲ್ಲಿ ಈ ನಂಬಿಕೆಯೂ ಆಳವಾಗಿ ಬೇರು ಬಿಟ್ಟಿರುತ್ತದೆ. ಭೂಮಿತಾಯಿಯೂ ಮುನಿಸಿಕೊಂಡರೆ ನಾವು ಬದುಕುವುದಿಲ್ಲ, ಅದಕ್ಕಾಗಿ ನಾವು ದುಡಿಯಬೇಕು ಎಂಬ ಹಂಬಲ ಹೊಂದಿರುತ್ತಾರೆ. ಸಾಮಾನ್ಯವಾಗಿ ರೈತಾಪಿ ಜನರು ಮೈಯಿ ಮುರಿದು ದುಡಿದು ಚೆನ್ನಾಗಿ ಜೀವನ ನಡೆಸುವವರು.

"ಕಾಡೂರು ಸೇರಿ ಸುತ್ತ ಹತ್ತೂರು ಎತ್ತುಗಳು ಅಲ್ಲಿದ್ವು. ಕೂರಿಗಿ ಹಿಂದ ಬೀಜ ಹೊತ್ತ ಉಡಿಗಳು, ಬುಕ್ಕಾ ಹಿಡಿದ ಕೈಗಳು, ಬಿತ್ತಾಕ ಮೊದಲು ತಾಲೀಮು ನಡಿಸಿದ್ವು ನಡನಡ್ವ ಬಡಿಗೇರ ಈರಣ್ಣ ತನ್ನ ಬಾಳಚಿ ಕೊಡತಿ ಸಮೇತ ಹಾಜರಾಗಿದ್ದ. ಕೂರಿಗಿ ಕುಂಟಿ ಮೇಳಿ ಮತ್ತೊಂದು ಮುರ್ದುಗಿರ್ದರ ಗೌಡರಿಗೆ ಈ ಈರಣ್ಣನೆ ಬೇಕು. ಕುಂಬಾರ ಕಾಳಪ್ಪನು ಅಷ್ಟ್ಯ ಗೌಡರ ಹೊಲ್ದಾನ ಬೀಜ ಬೆಳಗತನ ಅಂವ ಅಲ್ಯಾ ಸಣ್ಣದೊಂದು ಕುಲಿಮಿ ಮಾಡಿದ್ದ. ಕುಡಾ ಬಳಿ ಮುಂಜಾ ಮತ್ತೊಂದ್ಕೆಲ್ಲ ಕಾಳಪ್ಪ ಇದ್ದ."(ವನದುರ್ಗ: ೨೭,೨೮: ೨೦೦೮) ಗೌಡ ಎಂದ ತಕ್ಷಣದಲ್ಲಿಯೆ ನಮಗೆ ನೆನಪಿಗೆ ಬರುವುದು ಶ್ರೀಮಂತ ವ್ಯಕ್ತಿ ಎಂದು. ಇಲ್ಲಿ ಡಾ. ರಂಗರಾಜ ವನದುರ್ಗರವರು ಕಾಡೂರು ಕಾದಂಬರಿಯಲ್ಲಿ ಸುತ್ತ ಹತ್ತು ಹಳ್ಳಿಗೆ ಶ್ರೀಮಂತನಾದ ವ್ಯಕ್ತಿ ಆತನ ಹೊಲದಲ್ಲಿ ಕುದುರೆ ಓಡಿದರೆ ಇಚ್ಚೆ ದಂಡೆಯಿಂದ ಆಚೆದಂಡಿಗೆ ಹೋಗುವುದರಲ್ಲಿ ದಮ್ಮಿಗೆ ಬರುವುದು. ಇಂಥಹ ಹೊಲದಲ್ಲಿ ಸಾಮಾನ್ಯ ಗ್ರಾಮೀಣ ಜನರು ತಮ್ಮ-ತಮ್ಮ ಎತ್ತುಗಳನ್ನು ತೆಗೆದುಕೊಂಡು ಬಂದು ಗೌಡನ ಭೂಮಿಗೆ ಬೀಜ ಬಿತ್ತಿ ಹೋಗುವುದು ವಾಡಿಕೆಯಾಗಿತ್ತು.

"ಮೃಗಪ್ರವೇಶ ಮಳೆಗಾಲ ಬಂತು ಆಕಾಶದಲ್ಲಿ ಕಪ್ಪು ಮೋಡಗಳು ಸುತ್ತಾಡ ಹತ್ತಿದವು ಜನರೆಲ್ಲ ಮುಗುಲಿನ ಕಡೆಗೆ ಆಶಾ ಪೂರ್ಣ ದೃಷ್ಟಿಯಿಂದ ನೋಡತೊಡಗಿದರು. ಗ್ರಾಮದ ಮುಖ್ಯ ಜನರೆಲ್ಲ ದಕ್ಷಿಣೆ, ಬಾಗಿಣ ತೆಗೆದುಕೊಂಡು, ಬಾಜಾಬಜಂತ್ರಿಯ ಜೊತೆಗೆ ರಾಮಾದೀಕ್ಷಿತರ ಮನೆಗೆ ಬಂದರು, 'ರಂಟೆ ಪೂಜೆಯ ಮಹೂರ್ತ' ತೆಗೆದುಕೊಡುವ ಕೆಲಸ ದೀಕ್ಷಿತರದ್ದು. ಆ ದಿನ ದೀಕ್ಷಿತ ಇನ್ನೂ ಕತ್ತಲೆ ಇರುವಾಗಲೇ ಸ್ನಾನ ಸಂಧ್ಯಾವಂದನೆಗಳನ್ನೆಲ್ಲ ಮುಗಿಸಿಕೊಂಡು ತನ್ನ ಪಡಸಾಲೆಯಲ್ಲಿ ದೊಡ್ಡದೊಂದು ಜಮಖಾನೆಯನ್ನು ಹಾಸಿ, ಸಿದ್ಧನಾಗಿ ಕೂಡುತ್ತಿದ್ದನು. ಜನರು ಬಂದು ನಯ-ವಿನಯ, ಭಯ-ಭಕ್ತಿಯಿಂದ ಕೂಡುತ್ತಿದ್ದರು. ದೀಕ್ಷಿತನಿಗೆ ಆ ದಿನ ಸಿಗುವಷ್ಟು ಮರ್ಯಾದೆ ಇನ್ನಾವ ದಿನವೂ ಸಿಗುತ್ತಿರಲಿಲ್ಲ"(ಕುಸುನೂರ: ೬೬: ೧೯೮೮) ಚಂದ್ರಕಾಂತ ಕುಸುನೂರರು ಯಾತನಾಶಿಬಿರದಲ್ಲಿ ಹೇಳುವಂತೆ ಹೈದ್ರಾಬಾದ ಕರ್ನಾಟಕದ ಜನರು ಬಿತ್ತುವ ಸಮಯದಲ್ಲಿಯೂ ಮೂಹೂರ್ತ, ತಿಥಿ, ನಕ್ಷತ್ರವನ್ನು ನಂಬಿರುವವರು. ಗ್ರಾಮೀಣರು ಮಳೆಗಾಲ ಆರಂಭವಾಗುತ್ತಿದ್ದಂತೆ ದೀಕ್ಷಿತರಿಗೆ ಬಾಗಿಣಕೊಡುತ್ತಿದ್ದರು, ಭಕ್ತಿ, ಭಯದಿಂದ ತಮ್ಮ ಮುಂದಿನ ಕೃಷಿ ಜೀವನ ಸರಿಯಾಗಲಿ ಎಂದು ಬೇಡಿಕೋಳ್ಳುವದು ಯಾತನಾಶಿಬಿರ ಕಾದಂಬರಿಯಲ್ಲಿ ತಿಳಿಯುತ್ತದೆ.

"ಸುಗ್ಗಿ ಬಂತು ಎಂದರೆ ಕೊಯ್ಯುವ, ತೂರುವ, ರಾಶಿ ಮಾಡುವ ಸಂಭ್ರಮ ಒಕ್ಕಲಿಗರಿಗೆ. ಕೆಲವರಿಗೆ ಹತ್ತಿ ಬಿಡಿಸುವ ಉತ್ಸಾಹ, ಪೋಲಿಸಗೌಡರಿಗೆ ನೂರು ಕೂರಿಗೆ ಭೂಮಿ, ಒಂದೇ ಹಾಸಿಗೆಯಿಲ್ಲ. ಬೇರೆ ಬೇರೆ ಕಡೆ ಇವೆ. ಅರವತ್ತು ಕೂರಿಗಿಯಷ್ಟು ಭೂಮಿಯಲ್ಲಿ ಜೋಳ ಬಿತ್ತಿದ್ದರು, ಸುಮಾರು ನಲ್ವತ್ತು ಕೂರಿಗೆಯ ಬೆಳೆಯನ್ನು ಕೊಯ್ದು, ಸೂಡು ತಿರುವಿ ಊರ ಮುಂದಿನ ಹಳ್ಳದ ದಂಡೆಯ ಹೊಲದಲ್ಲಿ ತಂದು ಸಾವಣಿ ಹಾಕಿದ್ದರು. ಇನ್ನೊಂದು ಸಾವಣಿ ಕಾಡಬಸವನ ಹೊಲದಲ್ಲಿತ್ತು"(ಶಾಂತರಸ: ೬೬: ೨೦೧೦). ಶಾಂತರಸರು ತಿಳಿಸುವಂತೆ ಊರಲ್ಲಿ ಗೌಡರೆ ಹೆಚ್ಚಿನ ಭೂಮಿಯನ್ನು ಹೊಂದಿದರು. ಈ ಕಾದಂಬರಿಯಲ್ಲಿ ತಿಳಿಸುವಂತೆ ಕೆಳಜಾತಿಯವರು ಅಲ್ಪ-ಸ್ವಲ್ಪ ಭೂಮಿಯನ್ನು ಹೊಂದಿದರು ಗೌಡರ ಹಾಗೆ ಅವರ ರಾಶಿ ಬಹಳ ದಿನಗಳವರೆಗೆ ನಡೆಯುತ್ತಿರಲ್ಲಿಲ್ಲ ಸಣ್ಣ-ಸಣ್ಣ ಒಕ್ಕಲಿಗರು ಗೌಡರ ಹೊಲಗಳಲ್ಲಿ ದುಡಿಯುತ್ತಿದ್ದರು. ಶಾಂತರಸರು ನೈಜಾಂ ಶಾಹಿಯ ಪ್ರಾದೇಶಿಕ ಬದುಕಿನ ಸ್ಥಿತಿಗತಿ ಮತ್ತು ಸಾಧ್ಯತೆಗಳನ್ನು ಈ ಕಾದಂಬರಿಯಲ್ಲಿ ತಿಳಿಸಿದ್ದಾರೆ.

ಕುಂಬಾರ ವೀರಭದ್ರಪ್ಪರವರು ತಮ್ಮ ಕಾದಂಬರಿಗಳಲ್ಲಿ ಗ್ರಾಮೀಣ ಬದುಕಿನ ನಿಜಸ್ಥಿತಿಯನ್ನು ತೋರಿಸಿದ್ದಾರೆ. ಆರ್ಥಿಕವಾಗಿ ಸದೃಢವಿಲ್ಲದ ಜನ ಹೊಟ್ಟೆಪಾಡಿಗಾಗಿ ಅಲಿಯುವುದು, ಕೂಲಿ ಮಾಡುವುದು, ಗೌಡ, ಜಮೀನದಾರ, ದೊರೆ ಇವರುಗಳ ಹೊಲದಲ್ಲಿ ದುಡಿಯುವುದು ತಿಳಿಸುವರು. ಪ್ರತಿದ್ವಂದಿ, ಬೇಲಿಯ ಹೂಗಳು, ಹನುಮ, ಆರೋಹಣ, ಅರಮನೆ ಕಾದಂಬರಿಯಲ್ಲಿ ಗ್ರಾಮೀಣ ಬದುಕಿನ ಚಿತ್ರಣ ಅದರಲ್ಲಿಯೂ ಬಳ್ಳಾರಿಯ ಸುತ್ತ-ಮುತ್ತಲಿನ ಗ್ರಾಮಗಳ ನಿಜ ಬದುಕು ತಿಳಿಸುವಲ್ಲಿ ಕಾದಂಬರಿಕಾರರು ಮಹತ್ವದ ಸಾಧನೆ ಗೈದಿದ್ದಾರೆ. ಕೃಷಿ, ಭೂಮಿ ಇವು ಎರಡು ಗ್ರಾಮೀಣರು ಕಂಡುಕೊಳ್ಳುವ ಬಗ್ಗೆ ಚಿತ್ರಿಸುತ್ತಾರೆ. ಭೂಮಿಯನ್ನು ಜಮೀನದಾರರಿಂದ ಉಳುಮೆಗಾಗಿ ಪಡೆದು ಫಸಲು ತೆಗೆದ ನಂತರ ಅವರ ಭೂಮಿ ಅವರಿಗೆ ಹಿಂದುರುಗಿಸುವಂತದು. ಗ್ರಾಮೀಣರ ಜೀವನ ಹೆಚ್ಚು ಕೃಷಿಯನ್ನು ಅವಲಂಬಸಿರುವುದು ಕುಂ.ವೀ. ರವರ ಕಾದಂಬರಿಗಳು ತಿಳಿಸುತ್ತವೆ. ಇವರ ಇನ್ನೊಂದು ಕಾದಂಬರಿ ಶಾಮಣ್ಣ ಹೈದ್ರಾಬಾದ ಕರ್ನಾಟಕದ ಕೃಷಿಕ ವರ್ಗದವರ ಜೀವನದ ಮೇಲೆ ಬೆಳಕು ಚೆಲುವಂಥದ್ದು. ಇವರ ಇಡೀ ಕಾದಂಬರಿಯು ಗ್ರಾಮೀಣ ಭಾಗಕ್ಕೆ ಹೆಚ್ಚಿನ ಒತ್ತು ಕೊಟ್ಟವೆ.

ಇನ್ನೊಂದು ಕಡೆ ಕೋ ಚನ್ನಬಸಪ್ಪನವರು 'ಹಿಂದಿರುಗಿ ಬರಲಿಲ್ಲ' ಕಾದಂಬರಿಯಲ್ಲಿ ಮಳೆಬಾರದೆ ಇದ್ದಾಗ ರೈತನ ಸ್ಥಿತಿ ಹೇಗೆ ಇರುತ್ತದೆ ಎಂದು ತಿಳಿಸಿರುವವರು. ಹೈದ್ರಾಬಾದ ಕರ್ನಾಟಕದ ಜನರು ಮಳೆಯ ನಂಬಿಕುಳಿತರು. ಆಗ "ಶ್ರಾವಣ ಮಾಸ ಮುಗಿಯುತ್ತ ಬಂದರೂ ಬಿತ್ತನೆಯೇ ಆಗಲಿಲ್ಲ! ದೃಷ್ಟಿ ಹಬ್ಬುವವರೆಗೆ ಎಲ್ಲಿ ನೋಡಿದರೂ ಹರಗಿ ಹಸನು ಮಾಡಿದ ಭೂಮಿಯೇ,

ಬರದದೇವಿ ಬಾಯಿ ತೆರೆದು ನಿಂತುಕೊಂಡಂತೆ ವಿಸ್ತಾರವಾಗಿ ಹಬ್ಬಿತು. ಬಿತ್ತಲಿಕ್ಕೆಂದು ಸುಲಿದಿಟ್ಟುಕೊಂಡಿದ್ದ ನೆಲಗಡಲೆಯ ಬೀಜ ಇರುವೆಗೆ ಆಹಾರವಾಗಿ ಹೋಯಿತು! ಎಂಟು ರೂಪಾಯಿಗೆ ಒಂದು ಮಣ ನೆಲಗಡಲೆಯನ್ನು ತಂದು ಬೀಜ ಮಾಡಿಟ್ಟುಕೊಂಡು ಜನ ಮಳೆ ಬಾರದೆ ಹೋದುದರಿಂದ ದಿಕ್ಕು ತೋಚದೆ ಮುಗಿಲನ್ನೇ ನೋಡಿ ನೋಡಿ ರೋಸಿ ಹೋದರು."(ಚೆನ್ನಬಸಪ್ಪ: ೩೩೦: ೧೯೮೫) ಕೃಷಿಯನ್ನು ನಂಬಿದ ಗ್ರಾಮೀಣರಿಗೆ ನೈಸರ್ಗಿಕವಾಗಿ ಹಾನಿಯಾದಾಗ ಅವರ ಬದುಕು ತಲ್ಲಣಗೊಳ್ಳುವುದು ಇದು ಈ ಭಾಗದಲ್ಲಿ ಆಗಾಗ ಸಂಭವಿಸುತ್ತಲೇ ಇರುತ್ತದೆ. ಈ ಕಾರಣದಿಂದ ಹೈದ್ರಾಬಾದ ಕರ್ನಾಟಕದ ಗ್ರಾಮೀಣರ ಕೃಷಿಯ ಜೀವನದಲ್ಲಿ ಸ್ವಲ್ಪ ಮಟ್ಟಿಗೆ ನಿರಾಸೆದಾಯಕರಾಗಿದ್ದಾರೆ.

"ಶಿವರಾತ್ರಿಲಿಂದ ಯುಗಾದಿ ಹಬ್ಬದ ತನಕ ಆ ಜಿಲ್ಲಾದಾಗ ಹಳ್ಳಿಪಳ್ಳಿ ಹೊಲಗೋಳದಾಗೆಲ್ಲಾ ರಾಶಿ ಮಾಡೋ ಸಂಭ್ರಮ. ಶಿವರಾತ್ರಿ ಹಬ್ಬದ ಶಿವಗ್ಗಿ ದಿನಾನೇ ಮಲ್ಲಪ್ಪ ಜಮಾದಾರನ ಹೊಲಗೋಳದಾಗ ಜ್ವಾಳಾ ಕೊಯ್ಯೋದಕ್ಕ ಶುರು ಮಾಡಿದರು. ಎಲ್ಲಾ ಹೊಲದಾಗಿಂದ ಜ್ವಾಳದ ದಂಟು ಕೊಯ್ದು, ಸೂಡುಕಟ್ಟಿ, ಹೊರಿ ಮಾಡಿ ತಂದೂ ತಂದೂ ತ್ವಾಟಕ್ಕ ಹತ್ತಿಕೊಂಡಿರೋ ಲಗಸಮಿಗುಡಿಯಿರಾ ಹೊಲದಾಗ ತಂದು ಅಲ್ಲೇ ಗುಡಿಮುಂದ ದೆವ್ವಿನಂತಾ ಖಣಾ ತಯಾರ ಮಾಡಿದ್ದರು"(ಗೀತಾ ನಾಗಭೂಷಣ: ೭೮: ೨೦೦೫) ಗೌಡ, ಕುಲಕರ್ಣಿ ಎಂದು ಯಾವ ತಾರತಮ್ಯವು ಇಲ್ಲ, ಜಮಾದಾರ ಮಲ್ಲಪ್ಪನೆಂದರೆ ಊರಿನ ಪ್ರಮುಖರಲ್ಲಿ ಒಬ್ಬ. ಅದು ಅಲ್ಲದೆ ಭೂಮಿಯೂ ಗೌಡ, ಸಾವುಕಾರರಿಗಿಂತ ಕಡಿಮಿಯನ್ನು ಹೊಂದಿದವನಲ್ಲ. ವಾರಗಟ್ಟಲೇ ರಾಶಿ ನಡೆಯುತ್ತಿದವು. ಇನ್ನು ಬೇರೆ ಪ್ರದೇಶಗಳ ಕಾದಂಬರಿಯನ್ನು ಅಧ್ಯಯನ ಮಾಡಿದಾಗ ಕೆಳಜಾತಿಯವರಿಗೆ ಭೂಮಿ ಇರುವುದಾಗಲಿ ಉಳಿಮೆ ಮಾಡುವುದಾಗಲಿ ಕಂಡುಬರುವುದಿಲ್ಲ. ಆದರೆ ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಎಲ್ಲಾ ವರ್ಗದ ಜಾತಿ ಜನಾಂಗದವರು ಭೂಮಿಯನ್ನು ಹೊಂದಿ ಉಳಿಮೆ ಮಾಡುವುದು ಪ್ರಾದೇಶಿಕ ಕಾದಂಬರಿಗಳಿಂದ ತಿಳಿದು ಬರುವಂಥದು.

### 3. ಕೂಲಿ ಮುಯ್ಯಿ-ಆಯ ಪದ್ಧತಿ(Agriculture Workers system)

"ಕೃಷಿ ಕಾರ್ಯಗಳಲ್ಲಿ ತೊಡಗುವ ಜನಗಳಲ್ಲಿ ಎರಡು ವರ್ಗಗಳನ್ನಾಗಿ ಮಾಡಲಾಗುತ್ತದೆ. ಅವುಗಳನ್ನು ಪ್ರತ್ಯಕ್ಷ ಶ್ರಮ ಮತ್ತು ಪರೋಕ್ಷ ಶ್ರಮ ಆಧಾರಿತ ವರ್ಗಗಳೆಂದು ಕರೆಯಬಹುದು."(ಖಂಡೋಬಾ: ೩೦: ೧೯೯೯) ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಕೃಷಿಕ**ಲ್ಲಿ** ಎರಡು ರೀತಿಯ ಜನರನ್ನು ಕಾಣುತ್ತೇವೆ. ಒಂದು ರೈತನ ಭೂಮಿಯನ್ನು ಊಳುಮೆ ಮಾಡಿ ಬಿತ್ತಿ, ಬೆಳೆದು ಒಕ್ಕಲಿಗನೆನಸಿಕೊಳ್ಳುವ'ನು. ಅದೇ ರೀತಿ ರೈತನಲ್ಲಿಗೆ ಅಂದರೆ ಕಣಕ್ಕೆ ಅಥವಾ ಮನೆಗೆ ಬಂದು ರೈತನಿಂದ ಕುಸಿರೂಪದಲ್ಲಿ ಪಡೆಯುವ ಧಾನ, ಧರ್ಮ ಸ್ವೀಕರಿಸುವ ಜನರು. ಗ್ರಾಮೀಣರಲ್ಲಿ ಯನ್ನೂ ಒಂದು ಸಹ ಜೀವನದ ಬದುಕು ಅಂದರೆ ಒಬ್ಬರ ಹೊಲದಲ್ಲಿ ಒಬ್ಬರು ಹೋಗಿ ದುಡಿಯುವುದು. ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಇದು ಸಣ್ಣ-ಸಣ್ಣ ರೈತರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಪದ್ಧತಿಯನ್ನು ಸವಡಿ, ಮುಯ್ಯಿ ಎಂದು ಕರೆಯುವರು. ಇಂತ ಹಲವು ನಿಲುವುಗಳನ್ನು ಈ ಭಾಗದ ಕಾದಂಬರಿಯಲ್ಲಿ ಕಂಡು ಬರುತ್ತದೆ. ಕೂಲಿ ಪದ್ಧತಿಯೂ ಇದು ಹಿಂದಿನ ಕಾಲದಿಂದಲೂ ನಡೆದು ಬಂದ ಪದ್ಧತಿಯಾಗಿದೆ. ದೊಡ್ಡ-ದೊಡ್ಡ ಜಮೀನುದಾರರು, ಸಾವುಕಾರರು, ಕುಲಕರ್ಣಿಯರು ಕೂಲಿ ಆಳುಗಳ ಮೂಲಕವೆ ಭೂಮಿಯಿಂದ ಲಾಭ ಪಡೆಯುತ್ತಾರೆ. ಗೀತಾ ನಾಗಭೂಷಣರ ಬದುಕು ಕಾದಂಬರಿಯಲ್ಲಿ ಹೇಳಿರುವಂತೆ ಮಲ್ಲಪ್ಪ ಜಮಾದಾರ ಒಬ್ಬ ದೊಡ್ಡ ರೈತ ಅವನ ಹೊಲದಲ್ಲಿ ಕೂಲಿಯವರು ಹೇಗೆ ಬಂದು ಕೆಲಸ ಮಾಡುವರು ಎಂಬುದು ಈ ರೀತಿ ತಿಳಿಸುವರು. "ಹೆಣ್ಣಾಳುಗಳೆಲ್ಲ ಹೊರಿ ಮುಂದಕ್ಕೆಳ್ಕೊಂಡು ಕುಂತು ಜ್ವಾಳದ ತೆನಿ ಕತ್ತರ್ರಿಸಿ 'ಖಣ' ದಾಗ ಎಸೆಯುತ್ತಿದ್ದರು. ಮಲ್ಲಪ್ಪ ಜಮಾದಾರನ ಹೊಲದ ರಾಶಿ ಅಂದ್ರ ಊರಾಗಿನ ಕೆಳಗೇರಿ ಮಂದೀಗೆಲ್ಲಾ ದೊಡ್ಡ ಸುಗ್ಗಿ. ದೊಡ್ಡ ಹೊಲ್ಯಾರು, ಸಮಗಾರು, ಹಜಾಮರು, ಅಗಸರು, ಫಕೀರರು, ಮುಲ್ಲಾಗೋಳು, ಜೋಗಣೆರು ಅಂತ ಎಲ್ಲಾ ಮಂದಿ ಬಂದು ನೆರಿಯುತ್ತಿದ್ದರು. ಹಂತಿಕಟ್ಟಾ ರಾತ್ರಿ ಅಂತೂ ಅವನ ಹೊಲದಾಗ ಸಣ್ಣದೊಂದು ಜಾತ್ರೆ ನೆರದಂಗಾಗುತ್ತಿತ್ತು."(ಗೀತಾ ನಾಗಭೂಷಣ: ೭೮: ೨೦೦೫) ಮಲ್ಲಪ್ಪ ಜಮಾದಾರ ಇಡೀ ಊರಿಗೆ ಬೇಕಾದ ವ್ಯಕ್ತಿ. ಮೇಲಾಗಿ ಕೂಲಿಕಾರರಿಗೆ ದುಡಿಮೆಗೆ ತಕ್ಕ ಬೆಲೆ ಕೊಡುತ್ತಿದ್ದನ್ನು ಹೀಗಾಗಿ ಕೆಳಗೆರಿಯ ಜನರೆಲ್ಲ ಊರಲ್ಲಿ ಯಾರ ರಾಶಿ ಇದ್ದರು ಬಿಟ್ಟು ಮಲ್ಲಪ್ಪ ಜಮಾದಾರನ ಹೊಲಕ್ಕೆ ಬರುತ್ತಿದ್ದರು. ಗ್ರಾಮೀಣರಲ್ಲಿ ಕೂಲಿಯಲ್ಲಿಯು ತಾರತಮ್ಯ ನೋಡುತ್ತೇವೆ. ಹೆಣ್ಣುಮಕ್ಕಳಿಗೆ ಕಡಿಮೆ ಕೂಲಿ, ಗಂಡು ಮಕ್ಕಳಿಗೆ ಹೆಚ್ಚು ಕೂಲಿ ಕೊಡುವರು ಇಂದು ಕೂಡಾ ಆ ರೂಢಿ ಇರುವುದು ನೋಡುತ್ತೇವೆ. ಬದುಕು ಕಾದಂಬರಿಯಲ್ಲಿ ತಿಳಿಸಿರುವಂತೆ ಕೆಳವರ್ಗದ ಜನರು ಕೂಲಿಯಿಂದಲೇ ತಮ್ಮ ಜೀವನ ನಡೆಸುವದು ತಿಳಿಯುತ್ತದೆ.

ಡಾ.ಚೆನ್ನಣ್ಣ ವಾಲೀಕಾರರು ಗ್ರಾಮ ಭಾರತ ಕಾದಂಬರಿಯಲ್ಲಿ ಕಂಪನಿಯ ಲೇಬರ್ ಜನರು ದುಡಿದ ಬಗೆಯನ್ನು ಹೀಗೆ ಹೇಳುವರು "ಕಂಪನಿಯಲ್ಲಿ ಲೇಬರ್ ಆಫೀಸ್‌ರ ಆಗಿರಾಂವ ನಮ್ಮ ಗೆಳೆಯ ಅಂದದ್ದು ಗೌಡನಿಗೆ ಮರುಳ್ಗಾಡಿನಲ್ಲಿ ಓಯಸಿಸ್ ಕಂಡಂಗಾಯಿತು. ಕೂಡಲೇ ಕಲಬುರ್ಗಿಗೆ ಹೋದನು. ಅಣ್ಣಾರಾವ್ ವಕೀಲರಿಗೆ ಗಂಟುಬಿದ್ದನು. ಅವರಿಗೆ ಶಬಾದಿಗೆ ಕರಕೊಂಡು ಬಂದನು. ಎ.ಸಿ.ಸಿ. ಲೇಬರ್ ಆಫೀಸರಿಗೆ ಹೇಳಿದನು. ಅವರ ಮನೆಗೆ ಐದು ಚೀಲ ಜೋಳ, ಐದು ಚೀಲ ಬೆಳೆ ತಂದು ಹಾಕಿದನು. ಇದರಿಂದ ಲೇಬರ್ ಆಫೀಸರ ಸಂತೋಷಗೊಂಡು ಗಂಗು, ಮರಗು, ಸಂಕುರಿಗೆ ಮತ್ತೆ ಮೊದಲಿನ ಜಾಗಕ್ಕೆ ಸೇರಿಸಿಕೊಂಡನು" (ವಾಲೀಕಾರ: ೨೮೨: ೨೦೦೨) ಗ್ರಾಮೀಣ ಪ್ರದೇಶದ ಜನರು ಉದ್ಯೋಗವಿಲ್ಲದೆ ಹೋದರೆ ಊರಲ್ಲಿ ಕಿಡಿಗೆಡಿಗಳಾಗಿರುವರು ಎಂದು ಊರಲ್ಲಿ ಜನರು ನಂಬಿರುವಂತವರು ಹೀಗಾಗಿ ಗೌಡರು ಗಂಗು, ಮರುಗು ಇವರಿಗೆ ಉಪಾಯ

ಮಾಡಿ ಕಳೆದುಕೊಂಡಿದ ಉದ್ಯೋಗ ಮರಳಿ ಕೊಡಿಸಿದರು. ಗ್ರಾಮೀಣರಲ್ಲಿ ಇನ್ನೂ ಒಂದು ದೊಡ್ಡ ಗುಣ ಎಂದರೆ ಊರಲ್ಲಿ ಎಲ್ಲರು ಚೆನ್ನಾಗಿರಬೇಕು ಅಂದರೆ ಮಾತ್ರ ಊರಿನ ಏಳಿಗೆ ಸಾಧ್ಯ ಎಂದು ನಂಬಿದವರಾಗಿರುತ್ತಾರೆ ಎಂದು ಗ್ರಾಮ ಭಾರತ ಕಾದಂಬರಿಯಲ್ಲಿ ಚೆನ್ನಣ್ಣ ವಾಲೀಕಾರರು ಹೇಳುತ್ತಾರೆ. ವಾಲೀಕಾರರು ಇಡೀ ಕಾದಂಬರಿಗಳಲ್ಲಿ ಗ್ರಾಮೀಣ ಕೂಲಿಕಾರ, ಸಾವುಕಾರ, ರೈತರ ಜೀವನವನ್ನು ಬಿಡಿಸಿ ತೋರಿಸಿದ್ದಾರೆ. ಕೂಲಿಕಾರರು ಇಲ್ಲದೆ ಹೋದರೆ ಭೂಮಿಯಲ್ಲಿ ನಾವು ಯಾವುದೇ ಬೆಳೆ ತೆಗೆಯಲು ಸಾಧ್ಯವಿಲ್ಲ. ಅವರಿಂದಲೇ ಶ್ರೀಮಂತರ ಏಳಿಗೆಯಾಗುವುದು. ಸಾಮಾನ್ಯ ರೈತನಿಗೂ ಕೂಲಿ ಕಾರ್ಮಿಕರು ಬೇಕು ಎಂಬುದು ಹೈದ್ರಾಬಾದ ಕರ್ನಾಟಕ ಭಾಗದ ಕೆಲವು ನಿದರ್ಶನಗಳನ್ನು ಚಿತ್ರಿಸುತ್ತಾ ಕಾದಂಬರಿಗಳನ್ನು ಕಟ್ಟಿಕೊಟ್ಟಿದ್ದಾರೆ.

"ಕೂಲಿ ಆಳು ಕರ್ಕೊಂಡೆ ಹಗಲೆಲ್ಲ ಕೆಲಸ ಎಲ್ಲಿ ಇರತ್ಯೆತೆ. ಮೊದಲು ಮಾಡುವ
ಮಟ್ಟಿಗೆ ಹದಿನೈದು ಇಪ್ಪತ್ತು ಸಾಲು ಬಿತ್ತಿದರೆ ಸಾಕು"

"ಏಟನ ಆಗಲಿ. ಬಿತ್ತಾಕೆ ಒಬ್ರು ಬೇಕೇಬೇಕಲ್ಲ 'ಮೊದ್ಲು' ಮಾಡುದು ಆದ ಮೇಲೆ ಮನಿಯಾಗೆ ಕುಟ್ಟೋದು ಏನಾದ್ರೂ ಇದ್ದೇ ಇರುತಾತೆ. ಒಂದು ಮನಿಯಾಳ ಕೆಲಸ ಮಾಡಲೇಳು"

"ಹಂಗಾರೆ ಕೂಲಿ ಕರೆದು ಬರ್ತೇನೆ" ಎಂದು ಜಯದೇವ ಹೊರಡಲನುವಾದ"(ಚೆನ್ನಬಸಪ್ಪ: ೨೮೯: ೧೯೮೫) ಇಲ್ಲಿ ಬೀತ್ತುವುದು ಪ್ರಾರಂಭ ಮಾಡಬೇಕಾಗಿದೆ. ಜಯದೇವನು ಕೂಲಿ ಜನ ಬರದೆ ಹೋದರೆ ಯಾವ ಕೆಲಸವು ಆಗುವುದಿಲ್ಲ. ಅದಕ್ಕಾಗಿ ಮೊದಲು ಒಂದು ಆಳು ಕರೆದು ತರಲು ಹೇಳುವನು ಕೋ. ಚೆನ್ನಬಸಪ್ಪನವರು ಕೂಲಿಕಾರರ ಬಗ್ಗೆ ತಿಳಿಸಿದ ಸಂಗತಿ ಇದ್ದಾಗಿದೆ.

ಚಂದ್ರಕಾಂತ ಕುಸುನೂರರು ಗ್ರಾಮೀಣರ ಬದುಕು ತಿಳಿಸುವಲ್ಲಿ ಕೆರೂರುನಾಮ ಕಾದಂಬರಿಯಲ್ಲಿ ತುಳಸಕ್ಕನನ್ನು ಮುಖ್ಯವಾಗಿ ಇಟ್ಟುಕೊಂಡು ಹೀಗೆ ಹೇಳುವರು. "ಊಳವದಕ್ಕೆ ಬಿತ್ತುವದಕ್ಕೆಂದು ಇತ್ತೀಚೆಗೆ ಎರಡು ದೇವಣಿ ಎತ್ತುಗಳನ್ನು ಖರೀದಿಸಿದ್ದಳು. ಕೈಕೆಳಗೆ ಒಬ್ಬ ಆಳುಮಗಾ ಮೈಲಾರಿಯಿದ್ದ. ಮೈಲಾರಿ ಹೆಂಡತಿ ಮಾದೇವಿ ತುಳಸಕ್ಕನ ಹೊಲದಲ್ಲಿಯೇ ದುಡಿಯುತ್ತಿದ್ದಳು."(ಕುಸುನೂರ: ೨೪: ೨೦೦೫) ಶ್ರೀಮಂತರ ಹತ್ತಿರ ಆಳು ಮಕ್ಕಳು ಜೀತಕ್ಕೆ ನಿಂತರೆ ಅವರ ಹೆಂಡತಿಯರು ಸರ್ವಸಾಮಾನ್ಯವಾಗಿ ಗಂಡ ದುಡಿಯುವ ಹೊಲ ದೊಡೆಯನ ಹೊಲಗಳಿಗೆ ಕೂಲಿಗಾಗಿ ಹೋಗುವುದು ತಿಳಿಯುತ್ತದೆ.

"ಲೇನ್ ದೇನ್ (ಕೊಡಕೊಳ್ಳುವಿಕೆ) ವ್ಯವಹಾರ ಆತನೇ ನೋಡಿಕೊಳ್ಳುತ್ತಿದ್ದ. ಕೊಟ್ಟ ಸಾಲ ಬರೆದಿಡುವುದು, ಜೋಳ ಲಾಗಿಗೆ ಕೊಡುವುದು, ಲೆಕ್ಕ ಹಚ್ಚಿಡುವುದು, ಜೀತದಾಳಿಗಳಿಗೆ ಸಂಬಳ ಕೊಡುವುದು, ದಿನಗೂಲಿಗಳಿಗೆ ಕೂಲಿ ಹಾಕುವುದು ಎಲ್ಲ ಕೆಲಸಗಳನ್ನು ಗುರುಬಸಪ್ಪನೇ ಮಾಡುತ್ತಿದ್ದ."(ಶಾಂತರಸ: ೫೩: ೨೦೧೦) ಹೈದ್ರಾಬಾದ ಕರ್ನಾಟಕದ ನೈಜಾಂ ಶಾಹಿ ವ್ಯವಸ್ಥೆಯಲ್ಲಿ ಗೌಡನ ಹೊಲಗಳಲ್ಲಿ ದುಡಿಯುತ್ತಿದ್ದ ಗ್ರಾಮೀಣ ಜನರಿಗೆ ಕೊಡುವ ಕೂಲಿ ಸಲುವಾಗಿ ಒಬ್ಬ ವ್ಯಕ್ತಿಯನ್ನು ನೇಮಿಸುತ್ತಿದ್ದರು. ಜೀತದಾಳುಗಳಿಗೆ ವರ್ಷಕ್ಕೆ ಇಂತಿಷ್ಟು ಎಂದು ಕರಾರುಮಾಡಿ ಜೋಳ, ಬೇಳೆಕಾಳುಗಳನ್ನು ಕೊಟ್ಟು ಹಣ ವರ್ಷದ ಮೇಲೆ ಕೊಡುತ್ತಿದ್ದರು. ದಿನಗೂಲಿಯವರಿಗೆ ಒಂದು ದಿನವೋ, ವಾರದ ಒಳಗೋ, ಕೂಲಿ ನೀಡುತ್ತಿದ್ದರು. ಶಾಂತರಸರು ಸಣ್ಣಗೌಡಸಾನಿ ಕಾದಂಬರಿಯಲ್ಲಿ ತಿಳಿಸಿರುವಂತೆ ಜನರು ಜೋಳವನ್ನು ಕೂಲಿಯ ರೂಪದಲ್ಲಿ ಪಡೆಯುತ್ತಿದ್ದರು. ಕೆಲವು ಸಂದರ್ಭದಲ್ಲಿ ಗ್ರಾಮೀಣ ಜನರಿಗೆ ತಮ್ಮ ಜೀವನೊಪಾಯಕ್ಕೆ ಒಂದು ದಿನದೋ–ಎರಡು ದಿನದೋ ಕೂಲಿಯನ್ನು ಮೊದಲು ತೆಗೆದುಕೊಂಡು ನಂತರ ಅದು ಮುಟ್ಟುವವರೆಗೂ ಜೋಳ ಕೊಟ್ಟವರ ಹೊಲದಲ್ಲಿಯೂ, ಮನೆಯಲ್ಲಿಯೂ ಕೆಲಸವನ್ನು ಮಾಡುವ ರೀತಿಯನ್ನು ಈ ಭಾಗದ ಜನರ ರೂಢಿಯಾಗಿತ್ತು ಎಂದು ಹೇಳುವರು.

"ಶಿವರುದ್ರನ ಹೊಲದಲ್ಲಿ ಹೆಂಗಸರು ಸೇಂಗಾದ ಬೆಳೆಯಲ್ಲಿ ಸದೆ ತೆಗೆಯುತ್ತಿದ್ದರು. ಸಿಂಗಾರಿ ದೂರದ ಮರದ ಬೊಡ್ಡೆಗೊರಗಿ ಕುಳಿತು ಅವರನ್ನೇ ದಿಟ್ಟಿಸಿದಳು. ಮಾತು, ನಗು ಹಾಡುಗಳ ನಡುವೆ ಆ ಹಳ್ಳಿ ಹೆಂಗಸರು ತಮ್ಮ ವೈಯಕ್ತಿಕ ಚಿಂತೆ, ದುಃಖ ಬವಣೆಗಳನ್ನು ಸಂಪೂರ್ಣವಾಗಿ ಮರೆತು ಕೆಲಸದಲ್ಲಿ ತನ್ಮಯರಾಗಿದ್ದರು"(ಗೀತಾ ನಾಗಭೂಷಣ: ೭೭: ೨೦೦೫) ಜಾನಪದ ಸಾಹಿತ್ಯವನ್ನು ಓದುವ ಸಂದರ್ಭದಲ್ಲಿ ಸ್ತ್ರೀಯರು ಹಾಡುಗಳನ್ನು ಹಾಡಿರುವುದು ಕಂಡುಬರುತ್ತದೆ. ಕೂಲಿ ಕೆಲಸದಲ್ಲಿ ತೊಡಗಿದ ಮಹಿಳೆಯರು ತಮ್ಮ ಆಸರಿಕೆ, ಬೇಸರಿಕೆಯನ್ನು ಕಳೆದುಕೊಳ್ಳಲು ಹಾಡುಗಳನ್ನು ಹಾಡುವರು. ಹೊಲದೋಡೆಯ ಇವರು ಮಾಡುವ ಕೆಲಸದ ಬಗ್ಗೆ ಆಗಾಗ ಎಚ್ಚರಿಸುವನು. ಆದರು ಅವರು ಕೈಯಲ್ಲಿ ಕುರುಪಿ ಹಿಡಿದು ಕಳೆತಗೆಯುತ್ತಾ ಮುಂದುವರೆಯುವುದು ಗೀತಾ ನಾಗಭೂಷಣರ ಮಾಪುರತಾಯಿಯ ಮಕ್ಕಳು ಕಾದಂಬರಿಯಿಂದ ತಿಳಿದು ಕೊಳ್ಳುತ್ತೇವೆ. ಇದು ಹೈದ್ರಾಬಾದ ಕರ್ನಾಟಕದ ಕೂಲಿಗಾರರ ದಿನ ನಿತ್ಯದ ಜೀವನವಾಗಿರುತ್ತದೆ.

"ಫೌರನ್ ಝುರಿ ಬೆಟ್ಟ ಹತ್ತಿರವಿದ್ದ ತೋಟದಲ್ಲಿ ತನ್ನನ್ನೂ ಮುಲಾಕಾತು ಮಾಡಲು ಆಳು ಹನುಮನಿಂದ ಕುರುಮಯ್ಯನಿಗೆ ಹೇಳಿಕಳಿಸಿದ. ಕೊರುವರು ಈಗಾಗಲೇ ನೂರಾರು ಎಕರೆ ಹೊಲಗಳನ್ನು ಕಣ ಮಾಡಿಕೊಡಲು ಗುತ್ತಿಗೆ ಹಿಡಿದಿದ್ದರು. ಜೋಳದ ಪೈರನ್ನು ಕೊಯ್ದು ಗೂಡಿಗೆ ಹಾಕಿದ್ದರು. ಮೈತುಂಬ ಕೆಲಸ."(ಅಮರಚಿಂತ: ೭೧: ೧೯೯೮) ಅಂಕುಶ ದೊಡ್ಡಿಯ ಜನರು ಕುಸಲಪ್ಪ ಗೌಡನ ಮಾತು ಕೇಳುತ್ತಿದ್ದರು. ಆದರೆ ಅಂಕುಶ ದೊಡ್ಡಿಯ ಕೊರವರಿಗೆ ಬೇರೆ–ಬೇರೆ ಊರಿನ ಜನರು ಗುತ್ತಿಗೆ ಮಾಡಿ ಜೋಳದ ಕಣ ಮಾಡಿಸಲು ತಿಳಿಸಿದರು. ಹಳ್ಳಿಯ ಎಲ್ಲಾ ಕೊರುವರು ಒಪ್ಪಿಕೊಂಡು ನೂರಾರು ಎಕರೆ

ಭೂಮಿಯನ್ನು ಗುತ್ತಿಗೆ ಹಿಡಿದಿದ್ದರು. ದಿನಗೂಲಿ ಎಂದರೆ ಯಾವಚಿಂತೆಯೂ ಇರುವುದಿಲ್ಲ ಅವರು ದುಡಿದಷ್ಟು ಪಗಾರ. ಗುತ್ತಿಗೆ ಹಿಡಿದು ಕೂಲಿ ಮಾಡಿದರೆ ಹೆಚ್ಚಿನ ದುಡಿಮೆಯನ್ನು ಕಾಣುತ್ತೇವೆ. ಈ ಭಾಗದ ದೊಡ್ಡ-ದೊಡ್ಡ ರೈತರು ಗುತ್ತಿಗೆಗಾಗಿ ರಾಶಿಯನ್ನು ಮಾಡಿಕೊಡಲು ಹೇಳುವರು. ಜಂಬಣ್ಣ ಅಮರಚಿಂತರು ತಿಳಿಸುವಂತೆ ಜನರು ಗುತ್ತಿಗೆ ಹಿಡಿದು ಹಗಲು, ಇರುಳು ಎನದೆ ದುಡಿದು ತಮ್ಮ ಉಪಜೀವನ ನಡೆಸುತ್ತಿದ್ದರು.

"ಹೊತ್ತು ಮುಳುಗುತ್ತಿತ್ತು. ಸೂರ್ಯ ಆಗಲೇ ಮಾರಿ ಕೆಂಪಗೆ ಮಾಡಿಕೊಂಡು ಪಡುವಣಕ್ಕಿಳಿಯುತ್ತಿದ್ದ. ಉಗ್ರಪ್ಪ ಗೌಡನ ತ್ವಾಟದಲ್ಲಿ ಜೋಳದ ಬೆಳೆಯ ನಡುವಿನ ಸದಿ ತೆಗೆಯುತ್ತಿದ್ದ ಹೆಂಗಸರೆಲ್ಲ ಕೆಲಸ ಬಿಟ್ಟು ಎದ್ದು ತಮ್ಮ ತಮ್ಮ ಕುಂಚಿಗೆ, ರೋಟ್ಟಿಬುತ್ತಿ ತಂದಿದ್ದ ಖಾಲಿ ಪಾವಡ ರೂಡಿಸಿ ಸುತ್ತಿಕೊಳ್ಳುತ್ತಿದ್ದರು."(ಗೀತಾ ನಾಗಭೂಷಣ: ೩೪: ೨೦೦೯) "ದೀವಟಗ್ಯಾನ ಹೊಲದಾಗ ಬೆಳ್ಯಾಗ ಸದಿತಗೀಲಕ್ಕಂತ ಊರಾಗಿನ ಹತ್ತೆಂಟು ಹೆಣ್ಣಾಳುಗಳು ಬಂದಿದ್ದರು. ಕಲ-ಕಲ ಮಾಡುತ ತಮ್ಮ ಕೆಲಸದಲ್ಲಿ ನಿರತರಾಗಿದ್ದರು."(ಅದೇ: ೧೬೬: ೨೦೦೯) ಹೈದ್ರಾಬಾದ ಕರ್ನಾಟಕದ ಕೂಲಿಕಾರರ ಬದುಕಿನ ನಿಜ ಸ್ಥಿತಿಯನ್ನು ಗೀತಾ ನಾಗಭೂಷಣರವರು ತಿಳಿಸುತ್ತಾರೆ. ಗೌಡನ ಹೊಲದಲ್ಲಿ ಸದಿ ತಗೆಯಲು ಹೋದ ಎಲ್ಲಾ ಹೆಣ್ಣು ಮಕ್ಕಳು ಮಧ್ಯಾನದ ಸಮಯದಲ್ಲಿ ಊಟ ಮಾಡುವುದು. ಹೊತ್ತುಮುಳುಗಿದಾಗ ಉಗ್ರಪ್ಪ ಗೌಡ ಎಲ್ಲಾ ಆಳುಗಳಿಗೆ ಜೋಳ ಅಳೆಯುವದು ಇಲ್ಲಿ ಕೂಲಿಯು ಜೋಳದ ರೂಪದಲ್ಲಿ ಕೊಡಲಾಗುತ್ತಿತ್ತು. ಹೆಣ್ಣುಮಕ್ಕಳಿಗೆ ಇಂತಿಷ್ಟು ಎಂದು ಗಂಡು ಮಕ್ಕಳಿಗೆ ಇಂತಿಷ್ಟು ಎಂದು ಸೀಮಿತಗೋಳಿಸಿ ಕೂಲಿಕೊಡುತ್ತಿದ್ದ ಜೋಳ ತೆಗೆದುಕೊಂಡು ಕೂಲಿ ಆಳುಗಳು ಕುಂಚಿಗೆಯನ್ನು ತಗೆದುಕೊಂಡೆ ಬರುತ್ತಿದ್ದರು. ಗ್ರಾಮೀಣರ ಜೀವನ, ದುಡಿಯುವ ವರ್ಗದ ಬದುಕು ಈ ಕಾದಂಬರಿಯಲ್ಲಿ ಕಾದಂಬರಿಕಾರರು ಹಳ್ಳಿಯ ಜೀವನದ ಚಿತ್ರಣ ಸಲ್ಲಿಸಿದ್ದಾರೆ.

ಗ್ರಾಮೀಣ ಪರಿಸರದಲ್ಲಿ 'ಆಯ' ಪದ್ಧತಿಯನ್ನು ನೋಡುತ್ತೇವೆ. ರೈತನಿಗೆ ಬೇಕಾಗುವ ವಸ್ತುಗಳನ್ನು ಪೂರೈಸುವದು. ಗ್ರಾಮೀಣ ಪರಿಸರದಲ್ಲಿ ಆಯಗಾರರು ಎಂದರೆ ಬಡವರು, ನಿರ್ಗತಿಕರು, ಮತ್ತು ವಿವಿಧ ರೀತಿಯ ಕಸಬುಗಳನ್ನು ಮಾಡುವವರು. ಗುಡಿಯ ಪೂಜಾರಿ, ಚಮ್ಮಾರ, ಕುಂಬಾರ, ಬಡಿಗ, ಇಂಥಹ ವಿವಿಧ ಕಸುಬುಗಳಿಂದ ರೈತನಿಗೆ ಕೃಷಿಯಲ್ಲಿ ಸಹಾಯ ಮಾಡುವವರು. ಅದು ಅಲ್ಲದೆ ಆರ್ಥಿಕವಾಗಿ ರೈತನನ್ನೇ ಅವಲಂಬಿಸಿರುವಂತಹ ಜನಾಂಗವೇ ಆಯಗಾರರು. ಆಯಪದ್ಧತಿಯು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಅತ್ಯಂತ ಪುರಾತನವಾದದು. ಸಾಮಾಜಿಕವಾಗಿ ತನಗೆ ಕೃಷಿಯಲ್ಲಿ ಸಹಾಯ ಮಾಡಿದಕ್ಕಾಗಿ ವರ್ಷಕ್ಕೆ ಇಂತಿಷ್ಟು ದವಸ-ಧಾನ್ಯಗಳೆಂದು ನಿಗದಿ ಪಡಿಸುವನು. ಆಯಾವೃತಿಗೆ ಸಂಬಂಧಿಸಿದವರು ರೈತನ ಹೊಲ ಅಥವಾ ಮನೆಗೆ ಹೋಗಿ ಪಡೆದುಕೊಂಡುಬರುವದೆ 'ಆಯ' ಪದ್ಧತಿಯಾಗಿದೆ. ರೈತನು ಧಾನ್ಯರೂಪದಲ್ಲಿ ಕೊಡುವ ಸಂಭಾವನೆಗೆ 'ಆಯ' ಪದ್ಧತಿ ಎಂದು ಕರೆಯುತ್ತಾರೆ. ಹೈದ್ರಾಬಾದ ಕರ್ನಾಟಕದ ಪ್ರಾದೇಶಿಕ ಕಾದಂಬರಿಗಳಲ್ಲಿ ರೈತರು ಮಾಡುತ್ತಿದ್ದ 'ಆಯ' ಪದ್ಧತಿಯನ್ನು ತಿಳಿದು ಬರುತ್ತದೆ.

"ಬಡಿಗೇರ ಈರಣ್ಣ ತನ್ನ ಬಾಳಚಿ ಕೊಡತಿ ಸಮೇತ ಹಾಜರಾಗಿದ್ದ ಕೂರಿಗಿ ಕುಂಟಿ ಮೇಳಿ ಮತ್ತೊಂದು ಮುರ್ದುಗಿರ್ದರ ಗೌಡರಿಗೆ ಈ ಈರಣ್ಣನ ಬೇಕು. ಕಂಬಾರ ಕಾಳಪ್ಪನು ಅಷ್ಟ್ಯ ಗೌಡರ ಹೊಲ್ದಾನ ಬೀಜ ಬೆಳಗತನ ಅಂವ ಅಲ್ಯಾ ಸಣ್ಣದೊಂದು ಕೂಲಿಮಿ ಮಾಡಿದ್ದ. ಕೂಡಾ ಬಳಿ ಮುಂಜಾ ಮತ್ತೊಂದ್ಕೆಲ್ಲ ಕಾಳಪ್ಪ ಇದ್ದ."(ವನದುರ್ಗ: ೨೬,೨೮: ೨೦೦೮) ರೈತನು ತನ ಸಹಾಯಕ್ಕಾಗಿ ಕಂಬಾರ, ಬಡಿಗ ಎಂಬ ವಿವಿಧ ಜನಾಂಗದ ವೃತ್ತಿಗಾರರನ್ನು ಬಳಸಿಕೊಂಡು ಅವರಿಗೆ 'ಆಯ' ನೀಡಿ ತನ್ನ ಕೃಷಿಯ ಜೀವನ ನಡೆಸುವ ರೀತಿಯನ್ನು ರಂಗರಾಜ ವನದುರ್ಗರು ತಮ್ಮ ಕಾಡೂರು ಕಾದಂಬರಿಯಲ್ಲಿ ತಿಳಿಸಿದ್ದಾರೆ. ಜೊತೆಗೆ ಧಾನ, ಧರ್ಮ ಎಂಬುವ ರೀತಿಯಲ್ಲಿ ಹೊಲದ ಕಣಗಳಲ್ಲಿ ಶ್ರೀಮಂತರು, ಗೌಡರು, ಜಮೀನದಾರರು ಅಲ್ಲದೆ ರೈತ 'ಆಯ' ರೂಪದಲ್ಲಿ ಹಂಚುತಿದ್ದುದು ತಿಳಿಯುತ್ತದೆ. ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಇಂದಿಗೂ ಕೂಡಾ ಆಯ ಪದ್ಧತಿಯನ್ನು ನೋಡುತ್ತೇವೆ. ಈ ಭಾಗದಲ್ಲಿ ಈ ವೃತಿಯನ್ನು ಮಾಡುವವರಿಗೆ ಆಯಾಗಾರರು ಎಂದು ಕರೆಯುತ್ತಾರೆ. ರೈತ ಆಯಾಗಾರರಿಗೆ ಧಾನಕೊಟ್ಟು ತನ್ನ ಹೊಲದಿಂದ ಬೆಳೆದ ರಾಶಿಯನ್ನು ಮನೆಗೆ ಒಯ್ಯೂವದು ಇಂದಿಗೂ ನೋಡುತ್ತೇವೆ.

"ಗುಡ್ಡದೆತ್ತರ ಏರಿನಿಂತ ಜೋಳದ ರಾಶಿಯಿಂದ ಮಲ್ಲಪ್ಪ ಜಮಾದಾರ ಮೊಟ್ಟ ಮೊದಲ ಬುಟ್ಟಿ ತುಂಬಿ ಏನೋರ ಮಾಂತಯ್ಯ ಸ್ವಾಮಿಯ ಜೋಳಿಗೆಗೆ ಸುರಿಯುತ್ತಿದ್ದ. ಮತ್ತೆಡ್ಡು ಬುಟ್ಟಿ ತುಂಬಿ ಮಾಪುರ ತಾಯಿ ಜೋಗಣೆರ ಪರಡಿಗೆ ನೀಡಿದ ನಂತರವೇ ಉಳಿದ ಮಂದಿಗೆ ದಾನ ಕೊಡುತ್ತ ನಡೆಯುತ್ತಿದ್ದ. ಜಮಾದಾರನದು ದಾನ ಧರ್ಮದಲ್ಲಿ ಎತ್ತಿದ ಕೈ ದೊಡ್ಡಿ ಹೊಲೇರು, ಅಗಸರು, ಸಮಗಾರು, ಹಜಾಮರು, ಬೇಲಗಸಲ್ಲ್ಯಾರು, ಕುಂಬಾರು, ಕಂಬಾರು, ಬುಡಬುಡಕೆಯವರು, ಹೂಗಾರು, ಪಿಂಜಾರು ಅಂತೆಲ್ಲ ಬಂದವರಿಗೆ ತಲಾ ಒಂದೊಂದು ಬುಟ್ಟಿ ತುಂಬಿ ತುಂಬಿ ನೀಡುತ್ತಿದ್ದನು. ಎಲ್ಲರಿಗೂ ಕೊಟ್ಟಾದ ಮೇಲೆಯೇ ಚೀಲ ತುಂಬಲು ಪ್ರಾರಂಭಿಸುತ್ತಿದ್ದರು."(ಗೀತಾ ನಾಗಭೂಷಣ: ೮೦: ೨೦೦೩) "ಬೆಳಗಾ ಮುಂಜಾನೆ ಎದ್ದು ರೊಟ್ಟಿ ಸುಟ್ಟು ಕೊಂಡು ಕೆಲಸಕ್ಕೆ ಹೋಗುತ್ತಿದ್ದಳು. ಕೆಲಸದ ಜಾಗವೂ ಅಲ್ಲೆ ಹತ್ತಿರವೇ. ಗೋಡೆ ಕಟ್ಟುವ ಗೌಂಡಿಗಳಿಗೆ ಕಲಸಿದ ಮಾಲು, ಇಟ್ಟಂಗಿಗಳನ್ನು ಹೊತ್ತೊಯ್ದು ಕೊಡುವ ಕೂಲಿ ಕೆಲಸ ಮೊದಲೆರಡು ದಿನ ಅವಳಿಗದು ಕಷ್ಟವಾಯಿತು. ಸಿಮೆಂಟು, ರೇತಿಯಲ್ಲಾಡಿದ ಅಂಗೈಗಳು ತೂತುಬಿದ್ದು, ಉರಿದು ಎಂಟು ಹತ್ತು ದಿನಗಳಲ್ಲಿ ದಡ್ಡು ಬಿದ್ದುವು. ಎಂಟು ದಿನದ ಶನಿವಾರಕ್ಕೊಮ್ಮೆ ಅವರಿಗೆ ಪಗಾರದ ದಿನ.

ಏಳು ದಿನಗಳ ಕೂಲಿಯನ್ನು ಒಟ್ಟಿಗೆ ಅಂದು ಸಂಜೆ ಕೊಡುವ ವಾಡಿಕೆ. ಅಂದೆ ಕಲಬುರ್ಗಿಯ ಸಂತೆ ಕೂಡ"(ಗೀತಾ ನಾಗಭೂಷಣ: ೨೧೭: ೧೯೯೪).

ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಕೂಲಿಕಾರರು ಮತ್ತು ಆಯಗಾರರು ರೈತನನ್ನು ಹೊಂದಿಕೊಂಡು ಜೀವನ ಮಾಡುವುದು ನೋಡುತ್ತೇವೆ. ಈ ಭಾಗದ ಕಾದಂಬರಿಗಳಲ್ಲಿ ಕೂಲಿಯ ಜೀವನ ಗ್ರಾಮೀಣರಲ್ಲಿ ಹೇಗೆ ಬಿತ್ತರಗೊಳ್ಳುತ್ತದೆ ಎಂಬುವುದು ತಿಳಿಸುತ್ತವೆ. ಹೆಣ್ಣು ಮಕ್ಕಳಿಗೆ ಕಡಿಮೆ ಕೂಲಿ ಗಂಡು ಮಕ್ಕಳಿಗೆ ಹೆಚ್ಚು ಕೂಲಿ ಇದೆ. ಆಯ ಪದ್ಧತಿಯಲ್ಲಿಯೂ ರೈತ ತನಗೆ ಸಹಾಯ ಮಾಡಿದವರಿಗೆ ಹೆಚ್ಚು ಧಾನ್ಯಗಳನ್ನು ಕೊಟ್ಟರೆ ಇನ್ನುಳಿದ ಜನರಿಗೆ ಕಡಿಮೆ ಧಾನಮಾಡುವುದು ನೋಡುತ್ತೇವೆ. ಒಟ್ಟಾರೆಯಾಗಿ ಹಿಂದಿನ ಪರಂಪರೆಯಂತೆ ಧಾನ ಧರ್ಮ ಎಂಬುವುದು ಮುಂದುವರೆಸಿಕೊಂಡುಬಂದಿರುವ ಪದ್ಧತಿಗಳನ್ನು ಹೈದ್ರಾಬಾದ ಕರ್ನಾಟಕದ ಪ್ರಾದೇಶಿಕ ಕಾದಂಬರಿಗಳಿಂದ ತಿಳಿಯುತ್ತದೆ. ಕಾದಂಬರಿಕಾರರು ತಿಳಿಸಿರುವಂತೆ ಹೊಲ, ಮನಿ, ಕೆಲಸಕ್ಕೆ ರೈತ, ಸಾಹುಕಾರರು, ಗೌಡರು, ಕುಲಕರ್ಣಿಯರು, ಕೂಲಿಕಾರರನ್ನು ಅಥವಾ ಆಳುಗಳನ್ನು ನೇಮಿಸಿಕೊಳ್ಳುವರು. ಅವರಿಗೆ ಇಂತಿಷ್ಟು ಕೂಲಿ ಎಂದು ಕರಾರು ಮಾಡುತ್ತಿದ್ದರು.

## 4.ಇತರ ಕಸುಬುಗಳು (Other Works)

ಹೈದ್ರಾಬಾದ ಕರ್ನಾಟಕ ಪ್ರದೇಶದ ಜನರು ಕೃಷಿ ಬೇಸಾಯದ ಜೊತೆಗೆ ಇತರ ಕಸುಬುಗಳು ಮಾಡುತ್ತಿದ್ದರು. ಪಶುಸಂಗೋಪನೆ ಮತ್ತು ಮನೆಯಲ್ಲಿ ಹಲವು ವಸ್ತುಗಳನ್ನು ತಯಾರಿಸುವುದು ತಮ್ಮ ಉಪಕಸುಬುಗಳಾಗಿ ಮಾಡಿಕೊಂಡಿದ್ದರು. ಇಂತಹ ಕಸುಬುಗಳು ಗ್ರಾಮೀಣರ ಆರ್ಥಿಕ ಜೀವನಕ್ಕೆ ಆಧಾರಸ್ಥಂಬಗಳಾಗಿದ್ದವು. ಬದುಕು ಕಾದಂಬರಿಯಲ್ಲಿ ಮಲ್ಲಪ್ಪ ಜಮಾದಾರನ ಮನೆಯಲ್ಲಿ ಆಕಳು ಮತ್ತು ಎಮ್ಮೆಗಳನ್ನು ಸಾಕಿದ್ದನು ಹಣಕ್ಕಾಗಿ ಹಾಲು, ಮೊಸರು ಮಾರುತ್ತಿರಲ್ಲಿಲ್ಲ. ತನ್ನ ಮನೆಗೆ ಎಷ್ಟು ಬೇಕು ಅಷ್ಟೆ ಮಲ್ಲವ್ವ ತಗೆದುಕೊಂಡು ಉಳಿದ ಹಾಲು, ಮೋಸರು ತಮಗೆ ಬೇಕಾದವರಿಗೆ ಸುಮ್ಮನೆ ಕೊಡುವುದು ತಿಳಿಯುತ್ತದೆ. ಗ್ರಾಮೀಣರು ಹಳ್ಳಿಯಲ್ಲಿ ಹಣಕ್ಕಾಗಿ ಹಾಲು ಮೋಸರು ಮಾರುತ್ತಿರಲಿಲ್ಲ. ಮನೆಯಲ್ಲಿ ಮಕ್ಕಳು ಊಟಮಾಡಲು ಉಪಯೋಗಿಸುತ್ತಿದ್ದರು. ಇದರ ಜೊತೆಗೆ ಮಜ್ಜಿಗೆ ಮಾಡಿ ಬಡಬಗ್ಗರಿಗೆ ಕೊಡುತ್ತಿದರು. ಯಾರಿಗಾದರು ಮೋಸರು ಹಾಲು ಬೇಕಾದರೆ ಹಣವಿಲ್ಲದೆ ಕೊಡುತ್ತಿದರು. ಸಣ್ಣಗೌಡಸಾನಿ ಕಾದಂಬರಿಯಲ್ಲಿ ಮಾಬಿಯೂ ಕಾಳವ್ವನ ತಂಗಿಗೆ ಆಕಳ ಹಾಲು ಬೇಕು ಅಂದಾಗ ಆಕಳೆ ಸುಮ್ಮನೆ ಕೊಟ್ಟಿರುವುದು ತಿಳಿಯುತ್ತದೆ. ಮಾಬಿಯ ಮನೆಯಲ್ಲಿ ಎಷ್ಟು ಆಕಳು, ಎಮ್ಮೆಗಳು ಇದ್ದವು. ಅದೇ ರೀತಿಯಾಗಿ ಚೆನ್ನಣ್ಣ ವಾಲೀಕಾರರು ಹೇಳುವಂತೆ. ಕೋಟೆಯ ಬಾಗಿಲು, ಒಂದು ಹೆಣ್ಣಿನ ಒಳಜಗತ್ತು ಕಾದಂಬರಿಗಳಲ್ಲಿ ಜನರು ಹೈನುಗಾರಿಕೆಯನ್ನು ಮಾಡುವುದು ತಿಳಿಸುವರು. ಆಕಳ ಹಾಲನ್ನು ಪಂಚಾಮೃತಕ್ಕೆ ಬಳಸಿಕೊಳುವುದು, ದೇವರ ಪೂಜೆಗೆ ಹೀಗೆ ಗೋವುಗಳನ್ನು ದೇವರಿಗೆ ಹೋಲಿಸಲಾಗುತ್ತದೆ. ಹೈನುಗಾರಿಕೆಯ ಜೊತೆಗೆ ಕುರಿ, ಕೋಳಿ ಹಾಗೂ ಹಂದಿಗಳನ್ನು ಸಹ ಸಾಕಲಾಗುತ್ತಿತ್ತು.

"ಕುರುಮಯ್ಯ ತಾಂಡೆ ಮಟ್ಟಿದ್ದಾಗ ಜನ ಹಂದಿಗೊಬ್ಬರ ರಾಶಿ ಮಾಡುತ್ತಿದ್ದರು. ಹೆಂಗಸರು ಒಣಗಲು ಹಾಕಿದ ಗೊಬ್ಬರವನ್ನು ಬುಟ್ಟಿಗಳಲ್ಲಿ ತುಂಬಿಕೊಂಡು ಝರಿ ಬೆಟ್ಟದ ಕಡೆ ನಡೆಯುತ್ತಿದ್ದರು. ಗೊಬ್ಬರ ಬುಟ್ಟಿಗಳನ್ನು ತಲೆ ಮೇಲೆ ಹೊತ್ತ ಹೆಂಗಸರನ್ನು, ಗೊಬ್ಬರವನ್ನು ಗುಡ್ಡೆ ಹಾಕುತ್ತಿದ್ದ ಜನರನ್ನು ನೋಡುತ್ತಿದ್ದಂತೆ ಕುರುಮಯ್ಯನಿಗೆ ಅವರು ಹೊತ್ತದ್ದು, ಗುಡ್ಡೆ ಹಾಕುತ್ತಿರುವುದು ಗೊಬ್ಬರವನ್ನಲ್ಲ– ಕುಶಾಲಪ್ಪ ಕೊಟ್ಟ ಸಾಲ ಮತ್ತು ಬಡ್ಡಿ ಎನಿಸಿತು"(ಅಮರಚಿಂತ: ೧೫: ೧೯೮೮). ಕುಶಲಪ್ಪ ಗೌಡ ದೊಡ್ಡಿಯ ಜನಕ್ಕೆ ಸಾಲ ಕೊಡುತ್ತಿದ ಅದಕ್ಕೆ ಬಡ್ಡಿ ಹಚ್ಚುತ್ತಿದ. ಅದನ್ನು ಹಂದಿಯ ಗೊಬ್ಬರದ ಮೂಲಕ ತೀರಿಸಿಕೊಳ್ಳುತ್ತಿದ್ದ. ಇದು ದೊಡ್ಡಿಯ ಜನಕೆ ಉದ್ಯೋಗವೆ ಆಗಿತ್ತು. ಗೀತಾ ನಾಗಭೂಷಣರ ಕಾದಂಬರಿಗಳಲ್ಲಿ ಕೋಳಿ ಸಾಗಾಣಿಕೆಯನ್ನು ನೋಡುತ್ತೇವೆ. ಕೋಳಿಗಳನ್ನು ತಮ್ಮ ಮನೆಯಲ್ಲಿ ಊಟಕ್ಕಾಗಿ ಬಳಸುತ್ತಿದರು ಎಂದು ಮಲ್ಲಪ್ಪ ಜಮಾದಾರನ ಮನೆತನದ ಮೂಲಕ ಹೇಳಿದ್ದಾರೆ. ಮತ್ತೆ ಕೆಲವರು ಮಾರುತ್ತಿದ್ದರು. ಅದರಿಂದ ವ್ಯವಹಾರ ಮಾಡುತ್ತಿದ್ದರು ಎಂದು ಧುಮ್ಮಸು ಕಾದಂಬರಿಯಲ್ಲಿ ಗಂಗಾ ಮತ್ತು ಸೋನಿಯರ ಜೀವನದ ಮೂಲಕ ತಿಳಿಸಿದ್ದಾರೆ. "ಗಂಗಾ, ಸೋನಿಯರು ಕೋಳಿ ಮಾರಿ ಮನೆಗೆ ದಿನಸಿ ಸಾಮಾನುಕೊಳ್ಳಲು ಕಲಬುರ್ಗಿಯ ಸಂತೆಗೆ ಬರುವುದು ಹೆಚ್ಚಾಯಿತು."(ಗೀತಾ ನಾಗಭೂಷಣ: ೧೨೧: ೧೯೯೪) ಹೈದ್ರಾಬಾದ ಕರ್ನಾಟಕ ಭಾಗದಲ್ಲಿ ಕೋಳಿಗಳನ್ನು ಸಾಕುತ್ತಿದ್ದ ಉಲ್ಲೇಖ ಹಲವು ಕಾದಂಬರಿಗಳಲ್ಲಿ ಬಂದಿರುವುದು ನೋಡುತ್ತೇವೆ.

ಗ್ರಾಮೀಣ ಪ್ರದೇಶದ ಜನರು ಕೃಷಿಯಲ್ಲಿ ತಮ್ಮ ಜೀವನ ಸಾಗದೆ ಇದ್ದಾಗ ಬುಟ್ಟಿ, ಚಾಪೆಗಳನ್ನು ಮಾಡಿ ಮಾರಿ ಜೀವನ ಸಾಗಿಸುವುದು ಗೀತಾ ನಾಗಭೂಷಣರ ಬದುಕು ಕಾದಂಬರಿಯಲ್ಲಿ ನೋಡುತ್ತೇವೆ. ಕಲ್ಯಾಣಿ ಜೈಲಿನಲಿದ್ದ ಹೊಲದಲ್ಲಿ ಬೆಳೆ ಸರಿಯಾಗಿ ಬರಲ್ಲಿಲ್ಲ ಸಾಲ ಜಾಸ್ತಿಯಾಗಿತ್ತು ಆಗ ಬೆಳ್ಳಿಯು ಮಾಡಿದ ಉದ್ಯೋಗ ಬುಟ್ಟಿ ಮತ್ತು ಚಾಪೆಗಳೆ. "ಈರವ್ವನೂ ಬೆಳ್ಳಿಯ ಅಂಗಳಕ್ಕೆ ತನ್ನ ಹೊರೆಯನ್ನು ತಂದು ಹಾಕುತ್ತಿದ್ದಳು. ಪೊರಕೆ ಸೀಳಿ, ಕಡ್ಡಿ ಬೇರೆ ಮಾಡಿ, ಒಣಗಿಸಿ ಮತ್ತೆ ನೀರಿನಲ್ಲಿ ನೆನೆಸಿ ಬಾರಿಗೆ, ಬುಟ್ಟಿ, ಚಾಪೆ ಮೊದಲಾದವುಗಳನ್ನು ಹೆಣೆಯುವ ಕೆಲಸ ಈರಮ್ಮನಿಂದ ಕಲಿತುಕೊಂಡಳು ಬೆಳ್ಳಿ"(ಅದೇ: ೪೨೪: ೨೦೦೫). ತಮ್ಮ ಜೀವನದ ಹಲವು ತೊಂದರೆಗಳಿಗಾಗಿ ಜನರು ತಮಗೆ ದಕ್ಕುವ ಕಸುಬುಗಳನ್ನು ಮಾಡುವುದು ನೋಡುತ್ತೇವೆ.

ಹೈದ್ರಾಬಾದ ಕರ್ನಾಟಕದ ಪ್ರಾದೇಶಿಕ ಕಾದಂಬರಿಗಳು ತಿಳಿಸುವಂತೆ ಇಲ್ಲಿಯ ಕೆಲವು ಜನರು ಹಿಂದಿನ ಕಾಲದಿಂದಲೂ ವ್ಯಾಪಾರ ಮಾಡುವ ಪದ್ಧತಿಯನ್ನು ಮುಂದುವರೆಸಿದರು. ಗ್ರಾಮೀಣ ಪ್ರದೇಶದ ಜನರಿಗೆ ಜೀವನ ಉಪಯೋಗಿ ವಸ್ತುಗಳನ್ನು

ಹಳ್ಳಿ–ಹಳ್ಳಿಗಳಲ್ಲಿ ಮಾರುತ್ತಿದ್ದರು. ಗ್ರಾಮಗಳಲ್ಲಿ ಶೆಟ್ಟರು, ಶ್ರೀಮಂತರು ಅಂಗಡಿಗಳನ್ನು ಇಡುತ್ತಿದ್ದರು. ಸೆರಿ, ಸಿಂದಿಯ ಅಂಗಡಿಗಳ ಬಗ್ಗೆ ಈ ಭಾಗದ ಹಲವು ಕಾದಂಬರಿಯಲ್ಲಿ ಮೂಡಿಬಂದಿದೆ. ಇಲ್ಲಿಯ ಜನರು ಸಿಂದಿ ಮತ್ತು ಸರಾಯಿ ಹೆಚ್ಚು ಬಳಸುವದು ಕಾದಂಬರಿಗಳಿಂದ ತಿಳಿಯುತ್ತದೆ. ಈ ಉದ್ಯೋಗ ಹೆಚ್ಚಾಗಿ ಇಳಿಗರು ಮಾಡುವರು. ಮೀನುವ್ಯಾಪಾರ, ಹೂವಿನವ್ಯಾಪಾರವು ನೋಡುತ್ತೇವೆ. ಗ್ರಾಮೀಣರು ಕೃಷಿಯ ಜೊತೆ ಇನ್ನು ಹತ್ತು–ಹಲವು ಉಪಕಸುಬುಗಳನ್ನು ಮಾಡುತ್ತಿದ್ದರು ಎಂದು ಈ ಭಾಗದ ಕಾದಂಬರಿಕಾರರು ತಮ್ಮ ಬರವಣಿಗೆಯ ಮೂಲಕ ಅನಾವರಣಗೊಳಿಸಿದ್ದಾರೆ.

ಚೆನ್ನಣ್ಣ ವಾಲೀಕಾರರ ಕಾದಂಬರಿಗಳಲ್ಲಿ ತಿಳಿದು ಬರುವಂತೆ ಕುರುಬರು ಕುರಿಗಳನ್ನು ಸಾಕುತ್ತಿದ್ದರು ಅವುಗಳನ್ನು ಮಾರಿ ಜೀವನ ನಡೆಸುವುದು ಮತ್ತು ಕುರಿಗಳ ಮೈಮೇಲಿನ ಉಣ್ಣೆಯಿಂದ ಕಂಬಳಿಯನ್ನು ಕೂಡ ನೆಯ್ದು ಮಾರುವುದು ತಿಳಿಯುತ್ತದೆ. ಹೀಗೆ ಗ್ರಾಮೀಣ ಪ್ರದೇಶದ ಜನರು ಸಮಾಜದಲ್ಲಿಯ ಬೇಕು ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಅನೇಕ ವೃತ್ತಿಗಳನ್ನು ಮಾಡಿ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಂಡಿರುವುದು ಹೈದ್ರಾಬಾದ ಕರ್ನಾಟಕದ ಪ್ರಾದೇಶಿಕ ಕಾದಂಬರಿಗಳಲ್ಲಿ ಮೂಡಿಬಂದ ಅಂಶಗಳಾಗಿವೆ ಕಾದಂಬರಿಕಾರರು ಜನರ ಮಧ್ಯ ಇದ್ದು ಸತ್ಯ ಘಟನೆಗಳನ್ನು ನೋಡಿ ತಮ್ಮ ಸಾಹಿತ್ಯದ ಮೂಲಕ ಚಿತ್ರಿಸಿರುವುದು ಕಂಡುಬರುತ್ತದೆ.

## ಆಕರಗಳು(Reference)


೧) ಹೂಗಾರ. ಬಿ.ಪಿ. ಮಧ್ಯಕಾಲೀನ ಭಾರತ ಇತಿಹಾಸ. ಪು:೧೫೩: ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಸರಸ್ವತಿ ಗೋದಾಮು, ಗುಲಬರ್ಗಾ–೨೦೦೬
೨) ಖಂಡೋಬಾ ಪಿ.ಕೆ. ಕನ್ನಡ ಪ್ರಾದೇಶಿಕ ಕಾದಂಬರಿಗಳ ಜಾನಪದೀಯತೆ. ಪು:೨೬: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೯೯೯
೩) ಅದೇ ಪು:೨೬: ೧೯೯೯
೪) ಹಿರಿಯಣ್ಣ ಅಂಬಳಿಕೆ. ಮಲೆನಾಡಿನ ಜನಪದ ಸಂಪ್ರದಾಯಗಳು.ಪು:೧೨: ಪುಸ್ತಕ, ಚಿಲುಮೆ, ಮೈಸೂರು–೧೯೭೮
೫) ಕುಂಬಾರ ವೀರಭದ್ರಪ್ಪ. ಅರಮನೆ. ಪು:೨೨,೨೩: ಸಪ್ನ ಬುಕ್ ಹೌಸ್, ಬೆಂಗಳೂರು – ೨೦೦೮
೬) ವಾಲೀಕಾರ ಚೆನ್ನಣ್ಣ. ಒಂದು ಹೆಣ್ಣಿನ ಒಳಜಗತ್ತು. ಪು:೧: ದಲಿತ ಬಂಡಾಯ ಸಾಹಿತ್ಯ ಪ್ರಕಾಶನ, ಕೇಂದ್ರ ಗುಲಬರ್ಗಾ–೨೦೦೨
೭) ವನದುರ್ಗ ರಂಗರಾಜ ಕಾಡೂರು. ಪು:೨೬,೨೮: ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು– ೨೦೦೮
೮) ಕುಸುನೂರ ಚಂದ್ರಕಾಂತ. ಯಾತನಾಶಿಬಿರ. ಪು:೬೬: ಮನೋಹರ ಗ್ರಂಥ ಮಾಲೆ, ಧಾರವಾಡ–೧೯೮೮
೯) ಶಾಂತರಸ, ಸಣ್ಣಗೌಡಸಾನಿ. ಪು:೬೬: ನೃಪತುಂಗ ಅಧ್ಯಯನ ಸಂಸ್ಥೆ ಸೇಡಂ–೨೦೧೦ ೧೦) ನಾಗಭೂಷಣ ಗೀತಾ ಚಿಕ್ಕಿಯ ಹರೆಯದ ದಿನಗಳು. ಪು:೧೧೩: ಐ.ಬಿ.ಎಚ್. ಪ್ರಕಾಶನ, ಬೆಂಗಳೂರು–೨೦೦೫
೧೦) ಚೆನ್ನಬಸಪ್ಪ ಕೋ. ಹಿಂದಿರುಗಿ ಬರಲಿಲ್ಲ. ಪು:೩೧: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು–೧೯೮೫
೧೧) ನಾಗಭೂಷಣ ಗೀತಾ ಬದುಕು. ಪು:೭೮: ಲೋಹಿಯಾ ಪ್ರಕಾಶನ, ಬಳ್ಳಾರಿ–೨೦೦೫ ೧೩) ಖಂಡೋಬಾ ಪಿ.ಕೆ. ಕನ್ನಡ ಪ್ರಾದೇಶಿಕ ಕಾದಂಬರಿಗಳಲ್ಲಿ ಜಾನಪದೀಯತೆ. ಪು:೩೦: ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು–೧೯೯೯
೧೨) ನಾಗಭೂಷಣ ಗೀತಾ. ಬದುಕು. ಪು:೭೮: ಲೋಹಿ ಪ್ರಕಾಶನ ಬಳ್ಳಾರಿ–೨೦೦೫
೧೩) ವಾಲೀಕಾರ ಚೆನ್ನಣ್ಣ, ಗ್ರಾಮ ಭಾರತ. ಪು:೨೮೨: ದಲಿತ ಬಂಡಾಯ ಸಾಹಿತ್ಯ ಪ್ರಕಾಶನ, ಕೇಂದ್ರ ಗುಲಬರ್ಗಾ–೨೦೦೨
೧೪) ಕುಸುನೂರ ಚಂದ್ರಕಾಂತ, ಕೆರೂರುನಾಮ. ಪು:೨೪: ಲೋಹಿಯಾ ಪ್ರಕಾಶನ, ಬಳ್ಳಾರಿ – ೨೦೦೫
೧೫) ಶಾಂತರಸ, ಸಣ್ಣಗೌಡಸಾನಿ. ಪು:೫೩: ನೃಪತುಂಗ ಅಧ್ಯಯನ ಸಂಸ್ಥೆ. ಸೇಡಂ–೨೦೧೦
೧೬) ನಾಗಭೂಷಣ ಗೀತಾ, ಮಾಪುರತಾಯಿಯ ಮಕ್ಕಳು. ಪು:೬೬: ಐ.ಬಿ.ಎಸ್ ಪ್ರಕಾಶನ, ಬೆಂಗಳೂರು–೨೦೦೫
೧೭) ಅಮರಚಿಂತ ಜಂಬಣ್ಣ, ಕುರುಮಯ್ಯ ಮತ್ತು ಅಂಕುಶದೊಡ್ಡಿ. ಪು: ೭೧: ಕನ್ನಡ ಪುಸ್ತಕ ಪ್ರಾಧಿಕಾರ ಪಂಪಮಹಾಕವಿ ರಸ್ತೆ ಚಾಮರಾಜಪೇಟೆ ಬೆಂಗಳೂರು–೧೯೯೮
೧೮) ನಾಗಭೂಷಣ ಗೀತಾ, ಕಾಗೆ ಮುಟ್ಟಿತು. ಪು:೩೪: ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ–೨೦೦೯
೧೯) ಅದೇ: ಪು:೧೬೬: –೨೦೦೯
೨೦) ವನದುರ್ಗ ರಂಗರಾಜ, ಕಾಡೂರು. ಪು:೨೬,೨೮: ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು–೨೦೦೮
೨೧) ನಾಗಭೂಷಣ ಗೀತಾ, ಬದುಕು. ಪು:೮೦: ಲೋಹಿಯಾ ಪ್ರಕಾಶನ, ಬಳ್ಳಾರಿ–೨೦೦೫
೨೨) ಅದೇ. ಧುಮ್ಮಸು. ಪು:೨೧೬: ಮಹಿಳಾ ಸಾಹಿತ್ಯಿಕಾ ನವನಗರ, ಹುಬ್ಬಳ್ಳಿ–೧೯೯೪
೨೩) ಅಮರಚಿಂತ ಜಂಬಣ್ಣ, ಕುರುಮಯ್ಯ ಮತ್ತು ಅಂಕುಶದೊಡ್ಡಿ. ಪು:೧೫: ಕನ್ನಡ ಪುಸ್ತಕ ಪ್ರಾಧಿಕಾರ ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–೧೯೯೮
೨೪) ನಾಗಭೂಷಣ ಗೀತಾ: ಧುಮ್ಮಸು. ಪು:೧೨೧: ಮಹಿಳಾ ಸಾಹಿತ್ಯಿಕ,ನವ ನಗರ ಹುಬ್ಬಳ್ಳಿ –೧೯೯೪
೨೫) ನಾಗಭೂಷಣ ಗೀತಾ: ಬದುಕು. ಪು:೪೨೪: ಲೋಹಿಯಾ ಪ್ರಕಾಶನ–೨೦೦೫